
# ಹೆತ್ತಗೋನ ಹಳ್ಳಿ ಮಾಯಮ್ಮ

## ಎಚ್ ಆರ್ ಚೇತನ



# ಹೆತ್ತಗೋನಹಳ್ಳಿ ಮಾಯಮ್ಮ

ಲೇಖಕರು

ಎಚ್.ಆರ್. ಚೇತನ

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ

೧೪ /೩, ನೃಪತುಂಗ ರಸ್ತೆ

ಬೆಂಗಳೂರು - ೫೬೦ ೦೦೨

HETTAGONA HALLI MAYAMMA - A writeup on the Car Festival of goddess Hettagona Halli Mayamma written by H.R. Chetana Published by Janapada Yakshagana Academy No. 14/3, Nrupathunga Road, Bangalore - 5600 002 Pp xii + 48 Price Rs. 10/- First Edition 1995.

© ಲೇಖಕರು

ಬೆಲೆ : ಹತ್ತು ರೂಪಾಯಿ

ಮುದ್ರಕರು : ಮಂಡ್ಯ ಕಂಪ್ಯೂಟರ್ ಸೆಂಟರ್
ತಾವರೆಗೆರೆ, ಮಂಡ್ಯ

# ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಜಾನಪದ ಅಕಾಡಮಿಯು ನಮ್ಮ ಸಂಸ್ಕೃತಿ ಮೂಲವಾದ ಅನೇಕ ವಿಷಯಗಳನ್ನು ಕುರಿತಂತೆ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ನಿರ್ಧರಿಸಿತು. ಹೀಗೆ ಆರಂಭಿಸಿದ ಅನೇಕ ಮಾಲೆಗಳಲ್ಲಿ ಕರ್ನಾಟಕ ಜಾತ್ರೆಗಳ ಮಾಲೆಯೂ ಒಂದು.

ಕನ್ನಡ ನಾಡಿನಾದ್ಯಂತ ಪ್ರತಿಯೊಂದು ಹಳ್ಳಿಯಲ್ಲಿಯೂ ಅದರದೇ ಆದ ಗ್ರಾಮದೇವತೆಯ ದೇವಾಲಯವಿರುವುದನ್ನು ಕಾಣಬಹುದು. ಈ ದೇವತೆಗಳ ಹುಟ್ಟು ಬೆಳವಣಿಗೆ, ಜನಾಕರ್ಷಣೆ, ಹಬ್ಬ, ಜಾತ್ರೆ, ಆಚರಣೆ, ವಿಧಿ, ನಿಷೇದ ಇವೆಲ್ಲ ವೈವಿಧ್ಯ ಪೂರ್ಣವಾಗಿದ್ದು ಅಭ್ಯಾಸ ಯೋಗ್ಯವಾಗಿವೆ. ಇವುಗಳ ಅಧ್ಯಯನ ನಮ್ಮ ಗ್ರಾಮ ಜೀವನದ ವೈವಿಧ್ಯತೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವುದರ ಜೊತೆಗೆ ಮಾನವ ಶಾಸ್ತ್ರ, ಸಂಸ್ಕೃತಿ ಅಧ್ಯಯನ ಜಾನಪದ ಅಧ್ಯಯನ ಮತ್ತು ಇತಿಹಾಸಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಅಕಾಡಮಿ ಕರ್ನಾಟಕ ಗ್ರಾಮದೇವತೆಗಳು ಮತ್ತು ಅವುಗಳ ಜಾತ್ರೆಗಳನ್ನು ಕುರಿತಂತೆ ಹಸ್ತಪ್ರತಿಗಳಿಗೆ ಕರೆನೀಡಿತು. ನಮ್ಮ ಕರೆಗೆ ಓಗೊಟ್ಟು ಹತ್ತು ಜನ ಲೇಖಕರು ಹಸ್ತಪ್ರತಿಗಳನ್ನು ಕಳಿಸಿಕೊಟ್ಟರು.

ಅಕಾಡಮಿಯು ಪ್ರಕಟನೆಗೆ ತೆಗೆದುಕೊಂಡ ಪ್ರತಿಯೊಂದು ಮಾಲೆಗೂ ಬಂದ ಹಸ್ತಪ್ರತಿಗಳನ್ನು ಪರಿಶೀಲಿಸಿ, ಸಂಪಾದಿಸಿ ಮುದ್ರಣಕ್ಕೆ ಅಣಿ ಮಾಡಲು ಇಬ್ಬರು ಸಂಪಾದಕರನ್ನು ನೇಮಿಸಲಾಯಿತು. ಜಾತ್ರೆಯ ಮಾಲೆಗೆ ನಾಡಿನ ಪ್ರಸಿದ್ಧ ಜಾನಪದ ವಿದ್ವಾಂಸರುಗಳಾದ ಶ್ರೀ ಹ. ಕ. ರಾಜೇಗೌಡರು ಹಾಗೂ ಡಾ. ಡಿ. ಕೆ. ರಾಜೇಂದ್ರ ಅವರನ್ನು ಸಂಪಾದಕರಾಗಿ ಆಯ್ಕೆ ಮಾಡಲಾಯಿತು. ಈ ಮಿತ್ರರಿಬ್ಬರೂ ತಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರಷ್ಟೇ ಅಲ್ಲ ಜಾತ್ರೆ ಮಾಲೆಯ ಹತ್ತು ಗ್ರಂಥಗಳು ಹೊರಬರಲು ಕಾರಣರಾಗಿದ್ದಾರೆ. ನಮ್ಮ ಗ್ರಾಮ ಸಂಸ್ಕೃತಿಯನ್ನು ಉಳಿಸುವ ಅಕಾಡಮಿಯ ಈ ಯೋಜನೆಯು ಯಶಸ್ವಿಯಾಗಲು ಕಾರಣರಾದ ಈ ಇಬ್ಬರು ಹಿರಿಯ ವಿದ್ವಾಂಸರನ್ನು ಅಕಾಡಮಿಯ ಪರವಾಗಿ ವಂದಿಸುತ್ತೇನೆ. ಜಾನಪದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ನಿರತರಾಗಿರುವ ಈ ಮಾಲೆಯ ಗ್ರಂಥಕರ್ತರಿಗೂ ಇವುಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೆ ಅಕಾಡಮಿಯ ಪರವಾಗಿ ವಂದನೆಗಳು ಸಲ್ಲುತ್ತವೆ.

ಡಾ. ಜೀ. ಶಂ. ಪರಮಶಿವಯ್ಯ
ಅಧ್ಯಕ್ಷ ಹಾಗು ಪ್ರಧಾನ ಸಂಪಾದಕ

Blank

# ಸಂಪಾದಕರ ಮಾತು

ಜಾನಪದದ ಆದಿ ಹೇಗೆ ನಿಗೂಢವೋ, ಅಂತ್ಯವೂ ಹಾಗೇ ನಿಗೂಢ. ಹುಡುಕಿದಷ್ಟೂ, ತಡಕಿದಷ್ಟೂ, ಕೊನೆಯಿಲ್ಲದ ಅದರ ಎಳೆಗಳು ನಮ್ಮನ್ನು ಆ ನಿಗೂಢದತ್ತಲೇ ಕೊಂಡೊಯ್ಯುತ್ತವೆ. ಹೊಸ ಹೊಸ ಬೆರಗುಗಳನ್ನು ತೋರುತ್ತ ಬಿಚ್ಚಿಕೊಳ್ಳುವ ಅದರ ಪದರಗಳು, ನಮ್ಮ ಪ್ರಾಚೀನ ಸಂಸ್ಕೃತಿಯ ಅದ್ಭುತಗಳನ್ನು ಒಂದೊಂದಾಗಿ ಕಣ್ಣಮುಂದೆ ತರುತ್ತವೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ವೈಜ್ಞಾನಿಕ ತಳಹದಿಯ ಮೇಲೆ ತನ್ನ ಕಾರ್ಯವನ್ನು ಆರಂಭಿಸಿ ಕಾಲು ಶತಮಾನವನ್ನು ಸಮೀಪಿಸುತ್ತಿದೆ. ಅಂದಿನಿಂದಲೂ ಜಾನಪದ ಸಂಬಂಧವಾದ ಚಟುವಟಿಕೆಗಳು ಬೇರೊಂದು ರೀತಿಯಲ್ಲಿಯೇ ಆರಂಭಗೊಂಡು, ಗಮನಾರ್ಹ ಸಾಧನೆಯನ್ನೇ ಮಾಡುತ್ತ, ತೋರುತ್ತ ಬಂದಿದೆ. ಸಂಗ್ರಹಣೆ, ಸಂಶೋಧನೆ, ಸಂಪಾದನೆಗಳೇ ಅಲ್ಲದೆ, ಅವನ್ನು ಕುರಿತು ತಲಸ್ಪರ್ಶಿಯಾದ ವಿಮರ್ಶೆ ಹಾಗೂ ಅಧ್ಯಯನ ಕೂಡ, ನಮ್ಮ ಸಂಸ್ಕೃತಿಯ ಮಹತ್ವವನ್ನೂ ಅದರ ಹಲವು ಅಚ್ಚರಿಗಳನ್ನೂ ವಿವರಿಸುವಲ್ಲಿ ಯಶಸ್ವಿಯಾಗಿದೆ. ಸಾಹಿತ್ಯಕ್ಕಷ್ಟೇ ಕಟ್ಟು ಬೀಳದೆ, ಜಾನಪದದ ಏನೆಲ್ಲವನ್ನೂ ಕೈಗೆತ್ತಿಕೊಂಡು ಶೋಧಿಸಿ, ಅವುಗಳ ಮರ್ಮವನ್ನು ಭೇದಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ರೂಪುಗೊಂಡ ಹೊಸ ಹೊಸ ಸಿದ್ಧಾಂತಗಳ ಹಿನ್ನೆಲೆಯಲ್ಲಿ, ಜಾನಪದದ ಒಂದೊಂದು ವಸ್ತು - ವಿಷಯಗಳನ್ನು ವಿಶ್ಲೇಷಿಸುತ್ತ ಹೋದಂತೆ ದೊರೆತ ಹಲವು ಸಂಗತಿಗಳು ಅವನ್ನು ಹೆಚ್ಚು ಹುರಿದುಂಬಿಸಿ ಇನ್ನೂ ಹೆಚ್ಚು ಕಾರ್ಯೋನ್ಮುಖನಾಗಲು ಪ್ರೇರಕವಾಗಿವೆ. ಈ ಎಲ್ಲ ಕೆಲಸ ಕಾರ್ಯಗಳೂ ವೈಯಕ್ತಿಕ ನೆಲೆಯಲ್ಲಿ ನಡೆದಿರುವಂತೆಯೆ. ಕಾಲಕಾಲಕ್ಕೆ ಹುಟ್ಟಿಕೊಂಡ ಹಲವು ಸಂಸ್ಥೆಗಳೂ, ವಿಶ್ವವಿದ್ಯಾನಿಲಯಗಳು, ಅಕಾಡೆಮಿ, ಪರಿಷತ್ತು ಮುಂತಾದವು ಅದಕ್ಕೆ ಹೆಚ್ಚಿನ ಚಾಲನೆಯನ್ನು ಕೊಡುವಲ್ಲಿ ಯಶಸ್ವಿಯಾಗಿವೆ. ಜಾನಪದದ ಒಟ್ಟು ಕಾರ್ಯ ಹೆಚ್ಚು ಸಮರ್ಥವಾಗಿ ಹಾಗು ಸಾರ್ಥಕವಾಗಿ ಮುನ್ನಡೆಯಲು ಪ್ರೇರಕವಾಗಿವೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಮಹತ್ವದ ಕೆಲಸಗಳನ್ನು ಮಾಡುತ್ತಾ ಬಂದಿದೆ. ಧ್ವನಿಮುದ್ರಣ, ಛಾಯಾಚಿತ್ರೀಕರಣಗಳ ಜೊತೆ ಜೊತೆಯಲ್ಲಿಯೇ ಗ್ರಂಥ ಪ್ರಕಟಣೆಯನ್ನೂ ಹೆಚ್ಚಿನ ರೀತಿಯಲ್ಲಿ ಕೈಗೊಂಡಿದೆ. ಡಾ. ಜೀ. ಶಂ. ಪರಮಶಿವಯ್ಯ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಬಂದ ಮೇಲೆ ತಮ್ಮ ಅಧಿಕಾರದ ಕೊನೆಯ ಅವಧಿಯನ್ನು ಪ್ರಕಟಣೆಗೆ ಮೀಸಲಾಗಿಸಿದ್ದು ಜಾನಪದದ ದೃಷ್ಟಿಯಿಂದ ಒಂದು ಮಹತ್ವದ ಸಂಗತಿ. ಜಾನಪದಕ್ಕಾಗಿ ದುಡಿದ ಪ್ರಮುಖರ ಸಂಕ್ಷಿಪ್ತ ಜೀವನ ಚರಿತ್ರೆ, ಹಾಗೂ ಜಾನಪದದ ಹಲವು ಪ್ರಮುಖ ವಿಷಯಗಳನ್ನೊಳಗೊಂಡ ಕಿರುಹೊತ್ತಗೆಗಳನ್ನು ಪ್ರಕಟಿಸುವ ಯೋಜನೆ ಇವುಗಳಲ್ಲಿ ಮುಖ್ಯವಾದುದು.

ಜಾತ್ರೆಗಳು ನಮ್ಮ ಸಂಸ್ಕೃತಿಕ ಪರಂಪರೆಯ ಪ್ರಮುಖ ದಾಖಲೆಗಳು. ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳು, ಸಾಮಾಜಿಕ, ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ

ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಜಾತ್ರೆ ಕೇವಲ ಜನ-ದನಗಳ, ವ್ಯಾಪಾರ-ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ, ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಒಂದು ಜಾತ್ರೆಯ ತಲಸ್ಪರ್ಶಿಯಾದ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, - ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ, ಸಾಮಾಜಿಕ ಮಹತ್ವವನ್ನೂ ಪಡೆದುಕೊಂಡಿವೆ. ಅವು ಅಂದಿನಿಂದ ಇಂದಿನವರೆವಿಗೂ ಅಷ್ಟೇ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರ ಹಿನ್ನೆಲೆಯೇ ಇದಾಗಿದೆ.

ಕರ್ನಾಟಕ ಜಾನಪದ ಅಕಾಡಮಿಯು ಹಮ್ಮಿಕೊಂಡ ಕರ್ನಾಟಕದ ಜಾತ್ರೆಗಳು ಮಾಲೆಗೆ ಈ ಪುಸ್ತಕವನ್ನು ಬರೆದುಕೊಟ್ಟವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಮಂಡ್ಯ ಕಂಪ್ಯೂಟರ್ ಸೆಂಟರ್ ಮುದ್ರಣಾಲಯದವರಿಗೆ ಅಕಾಡಮಿಯ ಪರವಾಗಿ ವಂದನೆಗಳು.

ಹ. ಕ. ರಾಜೇಗೌಡರು
ಡಾ. ಡಿ.ಕೆ. ರಾಜೇಂದ್ರ

* * * * *

# ವಿಷಯ ಸೂಚಿಕೆ


| | |
|---|---|
| ಪ್ರಧಾನ ಸಂಪಾದಕರ ಮಾತು | v |
| ಸಂಪಾದಕರ ಮಾತು | vii |
| ಪರಿಸರ | ೧ |
| ಹಿನ್ನೆಲೆ | ೬ |
| ಪ್ರಾಚೀನ | ೧೧ |
| ಏಳೂರ ದೇವತೆ | ೧೫ |
| ಹಬ್ಬ | ೧೮ |
| ಜಾತ್ರೆ - ತೇರು | ೨೨ |
| ಗ್ರಾಮಯಾತ್ರೆ - ಓಕುಳಿ | ೨೫ |
| ವಿಧಿ ನಿಷೇದಗಳು | ೨೯ |
| ಮಾಯಮ್ಮನನ್ನು ಕುರಿತ ಹಾಡುಗಳು | ೩೨ |
| ವಕ್ತೃಗಳು | ೩೯ |


JK

# ಹೆತ್ತಗೋನಹಳ್ಳಿ ಮಾಯಮ್ಮ

## ಪರಿಸರ

ಮಂಡ್ಯ ಜಿಲ್ಲೆ ಧಾರ್ಮಿಕವಾಗಿ ಅತ್ಯಂತ ಪ್ರಾಚೀನ ಇತಿಹಾಸವನ್ನು ಹೊಂದಿರುವುದು ಕಂಡುಬರುತ್ತದೆ. ಕರ್ನಾಟಕದ ಅನೇಕ ಧರ್ಮಗಳು ಈ ಪ್ರದೇಶದಲ್ಲಿ ಉನ್ನತಿಗೊಂಡಿವೆ. ಶ್ರೀ ವೈಷ್ಣವ ಧರ್ಮ ಸಂಸ್ಥಾಪಕ ರಾಮಾನುಜಾಚಾರ್ಯ ಈ ಜಿಲ್ಲೆಯ ತೊಂಡನೂರಿನಲ್ಲಿ ನೆಲೆನಿಂತು ಧರ್ಮ ಪ್ರಸಾರ ಮಾಡಿರುವುದು ಕಂಡುಬರುತ್ತದೆ. ಭಾರತೀಯ ಪ್ರಾಚೀನ ಧರ್ಮವಾದ ಶೈವಧರ್ಮದ ಆದಿಚುಂಚನಗಿರಿ ಈ ಜಿಲ್ಲೆಯಲ್ಲಿದೆ. ಅನೇಕ ಧಾರ್ಮಿಕ ಕ್ಷೇತ್ರಗಳು, ಎಲ್ಲಾ ಧರ್ಮದವು ಈ ಜಿಲ್ಲೆಯಲ್ಲಿವೆ. ಮೇಲುಕೋಟೆ, ನಾಗಮಂಗಲ, ಬೆಳ್ಳೂರು, ಶ್ರೀರಂಗಪಟ್ಟಣ, ತೊಣ್ಣೂರು, ಚಿಕ್ಕಗಂಗವಾಡಿ, ಹಳೇಬೀಡು, ಅಗ್ರಹಾರ ಬಾಚಹಳ್ಳಿ, ಸಿಂಧಘಟ್ಟ, ಸಾಸಲು, ಕಿಕ್ಕೇರಿ, ಹುಲಿಕೆರೆ, ಇತ್ಯಾದಿ ಊರುಗಳಲ್ಲಿ ದೇವಾಲಯಗಳು ದೇವ ದೇವತೆಗಳು ಸಾಲು ಸಾಲೇ ಸಿಗುವರು. ಇಂತಹ ಒಂದು ಪರಿಸರದಲ್ಲಿಯೇ ಕೃಷ್ಣರಾಜಪೇಟೆ ತಾಲ್ಲೂಕು ಸಂತೇಬಾಚಹಳ್ಳಿ ಹೋಬಳಿಯಲ್ಲಿ ಹೆತ್ತಗೋನಹಳ್ಳಿ ಮಾಯಮ್ಮನ ದೇವಾಲಯವೂ ಇದೆ.

ಕೃಷ್ಣರಾಜಪೇಟೆಯಿಂದ ನಾಗಮಂಗಲಕ್ಕೆ ಹೋಗುವ ರಸ್ತೆಯಲ್ಲಿ ಹೊರಟರೆ ಕೃಷ್ಣರಾಜಪೇಟೆಯಿಂದ ಸುಮಾರು ೪ ಕಿ. ಮೀ. ದೂರದಲ್ಲಿ ರಸ್ತೆ ಎಡಬದಿಗೆ ದೊಡ್ಡಕೆರೆಯ ಅಂಚಿನಲ್ಲಿ ಅಗ್ರಹಾರ ಬಾಚಹಳ್ಳಿ ಸಿಗುತ್ತದೆ. ಇದೊಂದು ಇತಿಹಾಸ ಪ್ರಸಿದ್ಧ ದೇವಾಲಯಗಳ ಬೀಡು. ಹೊಯ್ಸಳರ ಕಾಲದ ಅನೇಕ ದೇವಾಲಯಗಳು ಇಲ್ಲಿ ಇವೆ. ತಮ್ಮ ನೆಚ್ಚಿನ ರಾಜರಿಗೆ ತಲೆಯೊಪ್ಪಿಸುವ ಗರುಡ ಸಂಪ್ರದಾಯದ ಆಚರಣೆಯ ಚಿತ್ರಗಳು ಇಲ್ಲಿನ ವೈಶಿಷ್ಟ್ಯ. ಊರಿನ ಅಂಚಿನಲ್ಲಿಯೇ ಇರುವ ಕೆರೆ ಊರಿಗೊಂದು ಕಳೆಕೊಟ್ಟಿದೆ. ಇಲ್ಲಿರುವ ವೀರಗಲ್ಲುಗಳ ಸಂಖ್ಯೆಯನ್ನು ಗಮನಿಸಿ ಹೇಳಬಹುದಾದರೆ ಇದೊಂದು ವೀರಭೂಮಿ ಎಂದರೆ ತಪ್ಪಾಗಲಾರದು.

ಅಗ್ರಹಾರ ಬಾಚಹಳ್ಳಿಯಿಂದ ಮುಂದುವರಿದರೆ ಒಳಗೆರೆ ಮೆಣಸದಿಂದ ಮುಂದೆ ಶೆಟ್ಟುನಾಯಕನ ಕೊಪ್ಪಲು ತಿಟ್ಟಿನಲ್ಲಿ ರಸ್ತೆಯ ಬಲಕ್ಕೆ ತಿರುಗಿದರೆ ನಾರಾಯಣದುರ್ಗದ ಬೆಟ್ಟದ ಸಾಲು ಮತ್ತು ಸಿಂಧಘಟ್ಟ ಕಾಣುತ್ತವೆ. ವಿಜಯನಗರದ ಕಾಲದಲ್ಲಿ ಈ ನಾರಾಯಣದುರ್ಗ ಈ ಭಾಗದ ಸೇನಾ ನೆಲೆಯಾಗಿತ್ತೆಂದು ಹೇಳುತ್ತಾರೆ. ಈ ದುರ್ಗಕ್ಕೆ ಕೋಟೆ ಇದ್ದು ಮೇಲುಭಾಗದಲ್ಲಿ ವಾಸದ ಭವನಗಳ ಅವಶೇಷಗಳು ಈಗಲೂ ಕಂಡುಬರುತ್ತವೆ. ಆಡಳಿತಕ್ಕೆ ಸಂಬಂಧಿಸಿದ ಅಧಿಕಾರಿಗಳು, ಪಾಳೆಯಗಾರರು ಮುಂತಾದ ಉನ್ನತಾಧಿಕಾರಿಗಳು ಸಿಂಧಘಟ್ಟದಲ್ಲಿರುತ್ತಿದ್ದರಂತೆ. ಈಗ ಸಿಂಧಘಟ್ಟ ಹೋಬಳಿ ಕೇಂದ್ರವಾಗಿದ್ದು ಒಂದು ಕಾಲದಲ್ಲಿ ಪಾಳೆಯಪಟ್ಟಾಗಿತ್ತೆಂಬುದರ ಕುರುಹಾಗಿ ಕೋಟೆಯ ಅವಶೇಷಗಳು ಕಂಡುಬರುತ್ತವೆ. ಈ ಊರಿನಲ್ಲಿಯೂ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಸಿಂಧಘಟ್ಟದಮ್ಮನ ದೇವಾಲಯವೂ ಒಂದು. ಇಲ್ಲಿ ಅಮ್ಮನ ವಿಗ್ರಹ

ಹಿಂದುಮುಂದಾಗಿ ನಿಂತಿದೆ. ಇದಕ್ಕೆ ಸಂಬಂಧಿಸಿದಂತೆ "ಸಿಂಧಘಟ್ಟದಮ್ಮ ಹಿಂದು ಮುಂದಾದಂತೆ" ಎಂಬ ಗಾದೆಮಾತು ಮತ್ತು ಈ ಬಗೆಗಿನ ಸ್ಥಳಗತೆಯೊಂದಿದೆ.

ಈ ಊರಿನ ರೈತ ಕುಟುಂಬವೊಂದಕ್ಕೆ ಬೇರೊಂದು ಊರಿನಿಂದ ಸೊಸೆಯಾಗಿ ಬಂದ ಹೆಣ್ಣುಮಗಳೊಬ್ಬಳಿಗೆ ಬೆಳಗಿನಿಂದ ಸಂಜೆಯವರೆಗೆ ಏನಾದರೂ ಕೆಲಸ ಮಾಡುತ್ತಲೇ ಇರಬೇಕು. ಒಂದು ಘಳಿಗೆ ನಿಂತರೆ ಕೂತರೆ ಮನೆಯವರು ಹಂಗಿಸಿ ಹಿಂಸಿಸುತ್ತಿದ್ದರು. ಆಕೆಗೆ ತಿನ್ನಲು ಉಣ್ಣಲೂ ಸರಿಯಾಗಿ ಕೊಡುತ್ತಿರಲಿಲ್ಲ. ಸದಾ ಮನೆಯ ಯಾವುದಾದರೂ ಎರಡು ಕಣ್ಣುಗಳು ಆಕೆಯನ್ನು ಗಮನಿಸುತ್ತಲೇ ಇರುತ್ತಿದ್ದವಂತೆ. ಹೀಗಿರುವಾಗ ಒಂದು ದಿನ ಆಕೆ ಹೇಗೋ ಈ ಕಣ್ಣುತಪ್ಪಿಸಿ ಮನೆಯಲ್ಲಿ ಸ್ವಲ್ಪ ತಿಂಡಿ ಕದ್ದು, ತನ್ನ ಸೆರಗಿಗೆ ಕಟ್ಟಿಕೊಂಡು ಕಸ ಪೊತ್ತು ಹೊಲಕ್ಕೆ ಹೋದಳು. ಅಲ್ಲಿಯೆ ಸ್ವಲ್ಪದೂರದಲ್ಲಿದ್ದ ದೇವಾಯಲ ಈಕೆಯ ಕಣ್ಣಿಗೆ ಬಿತ್ತು. ಸರಿ, ಅಲ್ಲಿ ತಿಂಡಿ ತಿಂದರೆ ಯಾರಿಗೂ ಕಾಣುವುದಿಲ್ಲ ಎಂದು ಆ ದೇವಾಲಯದೊಳಗೆ ಸರಸರನೆ ಹೋಗಿ, ಅವಸರವಸರವಾಗಿ ಸೆರಗಿನಲ್ಲಿದ್ದ ತಿಂಡಿಯನ್ನು ಬಿಚ್ಚಿ ಕೈಗೆ ತೆಗೆದುಕೊಂಡಳು. ಬಾಯಿಗೆ ಹಾಕಿಕೊಳ್ಳಲು ತಲೆ ಎತ್ತಿದರೆ ದೇವಿಯ ಎರಡು ಕಣ್ಣುಗಳು ಇವಳನ್ನೇ ನೋಡುತ್ತಿದ್ದವು. ಆಕೆಗೆ ಅತೀವ ನೋವಾಯಿತು. ದುಃಖದಿಂದ 'ಅಯ್ಯೋ ಯಾರೂ ಕಾಣದಂತೆ ತಿನ್ನೋಣ ಎಂದರೆ ನೀನೂ ನನ್ನನ್ನು ಬಿಡೆಯ, ನಿನ್ನ ಮನೆ ಹಾಳಾಗ' ಎಂದಳಂತೆ. ಕೂಡಲೇ ದೇವಿಯ ವಿಗ್ರಹ ಹಿಂದಕ್ಕೆ ತಿರುಗಿತಂತೆ. ಮುಂದೆ ದೇವಿಯೇ ಆ ಹೆಣ್ಣುಮಗಳ ಕಷ್ಟ ನಿವಾರಿಸಿದಳೆಂದು ಸ್ಥಳಗತೆ ಹೇಳುತ್ತದೆ.

ಸಿಂಧಘಟ್ಟದಿಂದ ಮುಂದೆ ನಾರಾಯಣದುರ್ಗದ ಬೆಟ್ಟದ ಸಾಲಿನಲ್ಲಿಯೆ ಮುಂದುವರಿಯುವ ರಸ್ತೆಯ ಅಕ್ಕಪಕ್ಕದ ತೆಂಗಿನ ಮರಗಳ ಆಚೆಯ ಬೆಟ್ಟ ನಮ್ಮೊಂದಿಗೇ ಪ್ರಯಾಣ ಮಾಡುತ್ತಿರುವಂತೆ ಭಾಸವಾಗುತ್ತದೆ. ಹೀಗೆಯೇ ನಾಲ್ಕೈದು ಕಿ. ಮೀ. ದೂರ ಹೋದರೆ ಗವಿರಂಗ ದೇವಸ್ಥಾನದ ಕ್ಷೇತ್ರ ಸಿಗುತ್ತದೆ. ಒಂದು ಸಾಧಾರಣ ಎತ್ತರದ ಗುಡ್ಡದ ಸುತ್ತಲೂ ಈ ಕ್ಷೇತ್ರ ಹರಡಿಕೊಂಡಿದೆ. ಅಲ, ಬಸರಿ, ಬೇವಿನ ಮರಗಳ ಕಂಪಿನ ತೋಪು ಪಕ್ಕದಲ್ಲಿಯೇ ಹರಿಯುವ ಹಳ್ಳ ಅದಕ್ಕೆ ಕಟ್ಟಿರುವ ಕೆರೆ ಅದರಾಚೆ ಸುತ್ತಲೂ ಸಾಧಾರಣ ಎತ್ತರದ ಬೆಟ್ಟಗುಡ್ಡಗಳು ಮತ್ತು ಕುರುಚಲು ಕಾಡು. ಗವಿರಂಗ ಹೆಸರೇ ಹೇಳುವಂತೆ ವೈಷ್ಣವ ದೇವರು. ಈ ಬಗ್ಗೆ ಸ್ಥಳಗತೆಯೊಂದು ಹೀಗಿದೆ.

ಇಲ್ಲಿಗೆ ಪಶ್ಚಿಮ ಭಾಗದಲ್ಲಿ ಮೂರು ನಾಲ್ಕು ಕಿ. ಮೀ. ದೂರದಲ್ಲಿ ಬಿಲ್ಲೇನಹಳ್ಳಿ ಗ್ರಾಮವಿದೆ. ಈ ಊರು ಬಹಳ ಪ್ರಾಚೀನವಾದುದೆಂದು ಹೇಳುತ್ತಾರೆ. ಈ ಊರಿನ ಗೌಡರೊಬ್ಬರು ತುಂಬಾ ದನಗಳನ್ನು ಸಾಕಿದ್ದರಂತೆ. ಅವುಗಳಲ್ಲಿ ಒಳ್ಳೆಯ ಹಾಲು ಕರೆಯುವ ಹಸುವೊಂದಿದ್ದಿತಂತೆ. ಈ ಎಲ್ಲವನ್ನೂ ಮೇಯಿಸಲು ಆಳು ಹುಡುಗನೊಬ್ಬ ಈ ಕ್ಷೇತ್ರವಿರುವ ಗುಡ್ಡದ ಕಾಡಿಗೆ ಹೊಡೆದುಕೊಂಡು ಹೋಗುತ್ತಿದ್ದ. ಕೆಲವು ದಿನಗಳ ಮೇಲೆ ಸಂಜೆ ದನಗಳು ಮನೆಗೆ ಬಂದಾಗ ಆ ಹೆಚ್ಚುಹಾಲು ಕರೆಯುತ್ತಿದ್ದ ಹಸುವಿನಿಂದ ಯಾರೋ ಹಾಲು ಕರೆದುಕೊಂಡಿರುವುದು ಕಂಡು ಬಂತು. ಏನೋ ಆಗಿದೆ ಎಂದು ಮನೆಯವರು ಸುಮ್ಮನಾದರು. ಆದರೆ ಪ್ರತಿದಿನವೂ ಹಾಗೆಯೇ ಆಗಲಾರಂಭಿಸಿದಾಗ, ದನಕಾಯುತ್ತಿದ್ದ ಹುಡುಗನ ಬಗ್ಗೆ ಅನುಮಾನಿಸಿ ಅವನನ್ನು ಹಿಂಸಿಸಲಾರಂಭಿಸಿದರು. ಆಗ ಆ ಹುಡುಗ ಆ

ಹಸುವಿನ ಚಲನವಲನವನ್ನು ಎಚ್ಚರಿಕೆಯಿಂದ ಗಮನಿಸಿದ. ಹಸು ಚೆನ್ನಾಗಿ ಮೇಯ್ದು ಸಂಜೆಯ ಹೊತ್ತಿಗೆ ಆ ಗುಡ್ಡದ ನೆತ್ತಿಗೆ ಹೋಯಿತು. ಅಲ್ಲಿ ಒಂದು ಹುತ್ತ. ಆ ಹುತ್ತದ ಬಾಯಿಗೆ ನೇರವಾಗಿ ಹಸು ನಿಂತು ಹಾಲು ಸುರಿಸುತ್ತಿತ್ತು. ಈ ಸೋಜಿಗ ಕಂಡ ಹುಡುಗ ಓಡಿಬಂದು ಮನೆಯ ಯಜಮಾನನಿಗೆ ಈ ವಿಷಯ ತಿಳಿಸಿದ.

ಆ ದಿನ ಯಜಮಾನನೂ ದನಗಳೊಂದಿಗೆ ತನ್ನ ಆಪ್ತರು ಕೆಲವರೊಂದಿಗೆ ಈ ಘಟನೆಯನ್ನು ಪರೀಕ್ಷಿಸಲು ಬಂದ. ನಿಗದಿಯಾದ ಕಾಲಕ್ಕೆ ಹಸು ಹುತ್ತದ ಮೇಲೆ ನಿಂತು ಹಾಲು ಸುರಿಸಿತು. ಅದು ಕೆಳಗಿಳಿದು ಬಂದನಂತರ ಇವರೆಲ್ಲ ಹೋಗಿ ಹುತ್ತದ ಕೋವೆಯಲ್ಲಿ ಇಣುಕಿದರು. ಅದರ ಕೆಳಗೆ ಒಂದು ಗುಹೆ. ಅಲ್ಲಿ ತೇಜಸ್ವಿಯಾದ ಒಬ್ಬ ಋಷಿ ತಪಸ್ಸು ಮಾಡುತ್ತಿದ್ದ. ಆಗ ಅವರೆಲ್ಲರೂ ಭಕ್ತಿಯಿಂದ ನಮಸ್ಕರಿಸಿದರು. ಆ ಋಷಿ ಬೇರಾರೂ ಆಗಿರದೆ ಸಾಕ್ಷಾತ್ ನಾರಾಯಣನೇ ಆಗಿದ್ದು ಅವರಿಗೆ ಆಶೀರ್ವದಿಸಿದನಲ್ಲದೆ ಈ ಸ್ಥಳ ರಂಗನಾಥ ಕ್ಷೇತ್ರವೆಂದು ಪ್ರಸಿದ್ಧವಾಗಲೆಂದು ಹರಸಿದನಂತೆ. ಹಸುವಿನಿಂದಾಗಿ ತಮಗೆ ನಾರಾಯಣನ ದರ್ಶನವಾದುದರಿಂದ ಪ್ರತಿವರ್ಷ ಸಂಕ್ರಾಂತಿಯಂದು ತಮ್ಮ ದನಗಳನ್ನು ಅಲ್ಲಿಗೆ ಹೊಡೆದುಕೊಂಡು ಹೋಗಿ ಪ್ರದಕ್ಷಿಣೆ ಹಾಕಿಸಿ, ರಂಗನಾಥನಿಗೆ ಧೂಪ ಹಾಕಿ ಬರುತ್ತಿದ್ದರಂತೆ. ಆ ಪದ್ಧತಿಯೇ ಈಗಲೂ ಮುಂದುವರಿಯುತ್ತಿದೆ ಎಂದು ಸ್ಥಳಪುರಾಣ ಹೇಳುತ್ತದೆ.

ಗವಿರಂಗ ದನಕರುಗಳ ದೇವರೆಂದೆ ಪ್ರಸಿದ್ಧಪಡೆದಿದ್ದಾನೆ. ಸಂಕ್ರಾಂತಿಯ ದಿನ ಇಲ್ಲಿ ಜಾತ್ರೆ ಆರಂಭವಾಗುತ್ತದೆ. ಮೂರುದಿನ ನಡೆಯುವ ಈ ಜಾತ್ರೆಗೆ ಲಕ್ಷಾಂತರ ದನಕರುಗಳು ಬಂದು ಪ್ರದಕ್ಷಿಣೆ ಹಾಕಿ ತಮ್ಮ ಭಕ್ತಿಯನ್ನು ರಂಗನಾಥನಿಗೆ ಅರ್ಪಿಸುತ್ತವೆ. ಅಂದು ಅವುಗಳನ್ನು ತೊಳೆದು, ಕೊಂಬುಗಳಿಗೆ, ಮೈಗೆ ಬಣ್ಣ ಹಚ್ಚಿ, ಗಂಟೆಸರ ಇತ್ಯಾದಿ ಅಲಂಕಾರ ಮಾಡಿ ಹೊಡೆದುಕೊಂಡು ಬರುತ್ತಾರೆ. ಸುಮಾರು ಮೂರು ತಿಂಗಳ ಕಾಲ ಹೀಗೆ ದನಕರುಗಳನ್ನು ತಂದು ಪೂಜೆಸಲ್ಲಿಸುತ್ತಾರೆ. ಮಂಡ್ಯ, ತುಮಕೂರು, ಹಾಸನ, ಮೈಸೂರು ಜಿಲ್ಲೆಗಳಿಂದ ಭಕ್ತರು ಹೆಚ್ಚು. ಆದರೆ ಇಲ್ಲಿ ದನಕರುಗಳ ಮಾರಾಟ ನಿಷಿದ್ಧ.*

ರಂಗನಾಥ ಮಾಂಸಹಾರಿ ದೇವರು. ವರ್ಷವಿಡೀ ಇಲ್ಲಿ ಕುರಿ, ಕೋಳಿ ಕುಯ್ದು ಪರ ಮಾಡುವವರು ಇದ್ದೇ ಇರುತ್ತಾರೆ. ತಮ್ಮ ದನಕರುಗಳಿಗೋ, ತಮಗೋ ತೊಂದರೆಯಾದಾಗ ಕಷ್ಟಬಂದಾಗ ಗವಿರಂಗನಾಥನಿಗೆ ಅದರಿಂದ ಪಾರುಮಾಡಿದರೆ ಕ್ಷೇತ್ರಕ್ಕೆ ಬಂದು ಪರ ಮಾಡಿ ಬಂದವರಿಗೆ ಅನ್ನ ಹಾಕುವುದಾಗಿ ಹರಕೆ ಹೊರುತ್ತಾರೆ. ದೊಡ್ಡ ದೊಡ್ಡ ಮಟ್ಟದಲ್ಲಿ ಪರ ಮಾಡುವವರೂ ಉಂಟು. ಹಸು, ಎಮ್ಮೆಗಳು ಕರು ಹಾಕಿದಾಗ ಗಿಣ್ಣಿನ ಬುತ್ತಿ ತಂದು ಪೂಜೆ ಸಲ್ಲಿಸಿ ಹೋಗುತ್ತಾರೆ. ಇಷ್ಟೆಲ್ಲಾ ಆದರೂ ಗವಿರಂಗ ಪ್ರಧಾನವಾಗಿ ದನಕರುಗಳ ದೇವರೆಂದೇ ಪ್ರಸಿದ್ಧಿ.

ಗವಿರಂಗನ ಕ್ಷೇತ್ರದಿಂದ ಉತ್ತರಕ್ಕೆ ಐದು ಕಿ. ಮೀ. ದೂರದಲ್ಲಿ ಮಾಳೂರು ಸಿಗುತ್ತದೆ. ಇದು ಇತಿಹಾಸ ಪ್ರಸಿದ್ಧವಾದ ಊರು. ತಲಕಾಡಿನಲ್ಲಿ ಆಳುತ್ತಿದ್ದ ಗಂಗರ

---

* ಈಚೆಗೆ ಪ್ರತಿ ಮಂಗಳವಾರ ನಡೆಯುವ ಸಂತೆಯಲ್ಲಿ ಮತ್ತು ಜಾತ್ರೆಯಲ್ಲಿ ದನಗಳ ಮಾರಾಟ ನಡೆಯುತ್ತಿದೆ

ಉಪರಾಜಧಾನಿಯಾಗಿತ್ತಂತೆ. ಇಲ್ಲಿ ಐದು ಶಿವಲಿಂಗಗಳಿವೆ. ಈಗ ಶಿಥಿಲವಾಗಿದ್ದರೂ, ಅನೇಕವು ನಾಶವಾಗಿದ್ದರೂ ಇನ್ನೂ ನೂರಾರು ಶಿವಾಲಯಗಳಿವೆ ಎಂದು ಹೇಳುತ್ತಾರೆ. ಮಾಳಗೂರಿನಲ್ಲಿರುವಷ್ಟು ಶಿವಾಲಯಗಳು, ಶಿವಲಿಂಗಗಳು ಜಗತ್ತಿನಲ್ಲಿಯೇ ಇಲ್ಲವೆಂಬುದಾಗಿ ಓರಿಯರು ಹೇಳುತ್ತಾರೆ.

ಹೊಯ್ಸಳ ದೊರೆ ವಿಷ್ಣುವರ್ಧನನ ಹೆಂಡತಿ ಶಾಂತಲಾದೇವಿ ಈ ಊರಿನವಳೆಂದು ಸ್ಥಳಗತೆ ಹೇಳುತ್ತದೆ. ಈಕೆಯ ತಂದೆ ಮಾರಸಿಂಗಯ್ಯ, ಗಂಗವಂಶದವನಾಗಿದ್ದು ಇಲ್ಲಿ ಆಳುತ್ತಿದ್ದ. ಗಂಗರಾಜ್ಯ ಹೊಯ್ಸಳರ ಅಧೀನವಾದ ಮೇಲೆ ಈತ ಹೊಯ್ಸಳರ ಸಾಮಂತನಾದ. ಈತನ ಶೌರ್ಯ ಪರಾಕ್ರಮ ಮತ್ತು ರಾಷ್ಟ್ರನಿಷ್ಠೆಗೆ ಮೆಚ್ಚಿದ ಹೊಯ್ಸಳರು ಈತನನ್ನು ತಮ್ಮ ಆಪ್ತವಲಯಕ್ಕೆ ಸೇರಿಸಿಕೊಂಡರಷ್ಟೇ ಅಲ್ಲ, ಈತನ ಮಗಳು ಶಾಂತಲೆಯನ್ನು ಯುವರಾಜನಿಗೆ(ವಿಷ್ಣುವರ್ಧನನಿಗೆ) ಮದುವೆ ಮಾಡಿಕೊಂಡರಂತೆ. ಮಾಳಗೂರಿನ ಶೈವಾಲಯಗಳಿಗೆ ಕಾರಣನಾದ ಈತನಿಗೆ ಮತ್ತು ಶಾಂತಲೆಗೆ ಇಲ್ಲಿ ಎಡೆ ಮತ್ತು ಪೂಜೆಗಳು ಸಲ್ಲುತ್ತವೆ. ಈಕೆ ಹೊಯ್ಸಳ ಪಟ್ಟಮಹಾದೇವಿಯಾದ ನಂತರ ತನ್ನ ತೌರಿನ ಮೇಲಿನ ಪ್ರೀತಿಯಿಂದ ಈ ಊರಿನ ಪಂಚಶಿವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ಶಾಸನಾಧಾರವನ್ನು ಉಲ್ಲೇಖಿಸಿ ವಿದ್ವಾಂಸರು ಆಕೆ ಈ ಊರಿನವಳಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

ಮಾಳಗೂರಿನಿಂದ ಪಶ್ಚಿಮಕ್ಕೆ ಆರು ಕಿ. ಮೀ. ದೂರದಲ್ಲಿ ಶ್ರವಣಬೆಳಗೊಳವಿದೆ. ಇಲ್ಲಿನ ಬೆಟ್ಟದಲ್ಲಿಯೇ ಲೋಕಪ್ರಸಿದ್ಧವಾದ ಗೋಮ್ಮಟೇಶ್ವರನ ಬೃಹದಾಕಾರದ ಮೂರ್ತಿ ಇರುವುದು. ಗಂಗದೊರೆ ಮುಮ್ಮಡಿ ರಾಚಮಲ್ಲನ ಪ್ರಧಾನಿಯಾಗಿದ್ದ ಚಾವುಂಡರಾಯ ಈ ಮೂರ್ತಿಯನ್ನು ತನ್ನ ತಾಯಿಯ ಆಶೆಯಂತೆ ಕೆತ್ತಿಸಿದನೆಂದು ಸ್ಥಳಗತೆಗಳಿಂದ ತಿಳಿದು ಬರುತ್ತದೆ. ಈ ತಾಯಿ ಮಗನ ಭಕ್ತಿಯ ಬಗೆಗೆ ಅನೇಕ ಕತೆಗಳು ದೊರೆಯುತ್ತವೆ. ಇದಕ್ಕೂ ಮುಂಚೆ ಇಲ್ಲಿಂದ ಉತ್ತರಕ್ಕೆ ಕೆಲವು ಮೈಲಿಗಳ ದೂರದಲ್ಲಿರುವ ಹಳೇ ಬೆಳಗೊಳ ಪ್ರಾಚೀನ ಜೈನಧರ್ಮ ಕ್ಷೇತ್ರವಾಗಿತ್ತೆಂದೂ ತನ್ನ ಜೀವಿತದ ಕಡೆಯ ದಿನಗಳಲ್ಲಿ ಮೌರ್ಯಚಕ್ರವರ್ತಿ ಚಂದ್ರಗುಪ್ತಮೌರ್ಯ ಬಂದು ಕಾಲಕಳೆದುದು ಈ ಸ್ಥಳದಲ್ಲಿಯೇ ಎಂದು ಅತ ಕುಂತು, ನಿಂತು, ಓಡಾಡಿದ ಸ್ಥಳಗಳನ್ನು ತೋರಿಸುತ್ತಾರೆ. ಶ್ರವಣಬೆಳಗೊಳ ಒಂದು ಜೈನ ಧಾರ್ಮಿಕ ಯಾತ್ರಾಸ್ಥಳ.

ಶ್ರವಣಬೆಳಗೊಳದಿಂದ ದಕ್ಷಿಣಕ್ಕೆ ನಾಲ್ಕೈದು ಕಿ. ಮೀ. ದೂರದಲ್ಲಿ ಸಾಸಲು ಕ್ಷೇತ್ರವಿದೆ. ಇದು ಭೈರವೇಶ್ವರ ಕಾವ್ಯದ ಸ್ಥಳವೆಂದು ತಿಳಿದು ಬರುತ್ತದೆ. ಇಲ್ಲಿ ಶಂಭುಲಿಂಗೇಶ್ವರ ಮತ್ತು ಸೋಮೇಶ್ವರ ದೇವಾಲಯಗಳಿವೆ. ಇದೊಂದು ಪ್ರಾಚೀನ ಶೈವಕ್ಷೇತ್ರವೆಂದು ಹೇಳಬಹುದು. ಇದರ ಪ್ರಸಿದ್ಧಿ ಇಲ್ಲಿ ದೊರೆಯುವ ಒಂದು ರೀತಿಯ ಮಣ್ಣಿನಿಂದ ಹರಡಿದಂತೆ ಕಂಡುಬರುತ್ತದೆ. ಮೈಯಲ್ಲಿ ಹುಣ್ಣು, ಕುರು ಇತ್ಯಾದಿ ಆದವರು ಸೋಮವಾರ ಇಲ್ಲಿಗೆ ಬಂದು, ಇಲ್ಲಿಯ ಕಲ್ಯಾಣಿಯಲ್ಲಿ ಸ್ನಾನಮಾಡಿ, ಶಂಭುಲಿಂಗೇಶ್ವರನಿಗೆ ಪೂಜೆ ಸಲ್ಲಿಸಿ, ಇಲ್ಲಿನ ಹುತ್ತದಲ್ಲಿನ ಮಣ್ಣನ್ನು ಗಾಯಗಳಿಗೆ ಹಚ್ಚುತ್ತಾರೆ. ಇದರಿಂದ ಅವು ವಾಸಿಯಾಗುತ್ತವೆ ಎಂದೂ ನಂಬುತ್ತಾರೆ. ಈ ಹಿನ್ನೆಲೆಯಲ್ಲಿ

ಇದೊಂದು ನಾಗಕ್ಷೇತ್ರವೂ ಆಗಿದೆ. ಇಲ್ಲಿಯ ಸುತ್ತಲಿನ ಜನ ಈ ಹಿನ್ನೆಲೆಯಲ್ಲಿ ನಾಗೇಗೌಡ, ನಾಗಣ್ಣ,ನಾಗರಾಜ ಎಂಬ ಹೆಸರನ್ನು ಇಡುತ್ತಾರೆ. ಈ ಕ್ಷೇತ್ರಕ್ಕೆ ಅಪಾರ ಗ್ರಾಮಸ್ತರು ಆದರಲ್ಲೂ ಒಕ್ಕಲಿಗರು ನಡೆದುಕೊಳ್ಳುತ್ತಾರೆ.

ಈ ಮೇಲೆ ಹೇಳಿರುವ ಧಾರ್ಮಿಕ ಕ್ಷೇತ್ರಗಳ ಮಧ್ಯೆ ಎಲ್ಲಾ ದಿಕ್ಕೂ ಮತ್ತು ಸ್ಥಳಗಳಿಂದಲೂ ಆರೇಳು ಕಿ. ಮೀ. ದೂರದಲ್ಲಿ ಹೆತ್ತಗೋನಹಳ್ಳಿ ಮತ್ತು ಆ ಊರಿನಿಂದ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಮಾಯಮ್ಮನ ದೇವಾಲಯವಿದೆ. ಗವಿರಂಗನಾಥ ಕ್ಷೇತ್ರದಿಂದ ಪಶ್ಚಿಮಕ್ಕೆ ನಾಲ್ಕು ಕಿಲೋಮೀಟರ್ ದೂರ. ಈ ಕ್ಷೇತ್ರದ ಹತ್ತಿರ ಹರಿಯುವ ಹಳ್ಳವೇ ಮಾಯಮ್ಮನ ಗುಡಿಯ ಹಿಂದೂ ಹರಿಯುತ್ತದೆ. ಹೆತ್ತಗೋನಹಳ್ಳಿ ಮಾಯಮ್ಮ ಅಲ್ಲದೆ, ಕಿಕ್ಕೇರಿಯಮ್ಮ ದಮ್ಮನಿಂಗಳದಮ್ಮ ಮುಂತಾದ ಅನೇಕ ದೇವ ದೇವತೆಗಳಿದ್ದಾರೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಇವರೆಲ್ಲಾ ಅಣ್ಣ-ತಮ್ಮಂದಿರು;ಅಕ್ಕತಂಗಿಯರು, ಮಕ್ಕಳು ಆಗಿರುತ್ತಾರೆ. ನಮ್ಮ ಗ್ರಾಮಾಂತರ ಭಕ್ತರ ದೃಷ್ಟಿಯಲ್ಲಿ ಗೊಮ್ಮಟೇಶ್ವರ ಮಾಯಮ್ಮನಿಗೆ ಅಣ್ಣ, ರಂಗನಾಥನಿಗೆ ತಮ್ಮ ಹೀಗೆಯೆ; ಈ ಕ್ಷೇತ್ರಗಳು ಮತ್ತು ದೇವದೇವತೆಗಳ ಸಂಬಂಧದ ಬಗೆಗೆ ಕಥೆಗಳು ದೊರೆಯುತ್ತವೆ.

* * * * *

## ಹಿನ್ನೆಲೆ

ಅನೇಕ ವಿದ್ವಾಂಸರ ಪ್ರಕಾರ, ಭಾರತೀಯ ದೈವಗಳ ಉಗಮ ಕ್ರಿಸ್ತ ಪೂರ್ವಕ್ಕೆ ಹೋಗುತ್ತದೆ. ಕಿ. ಪೂ. ೨೦೦೦ ದ ಹೊತ್ತಿಗೆ ಭಾರತ ಮತ್ತು ಏಷ್ಯಾಖಂಡದ ಅನೇಕ ಕಡೆ ಶೈವಧರ್ಮ ಪ್ರಬಲವೂ ವ್ಯಾಪಕವೂ ಆಗಿತ್ತೆಂಬ ಅಭಿಪ್ರಾಯವಿದೆ. ಮೊದಮೊದಲು ಪ್ರಕೃತಿಯ ವೈಚಿತ್ರ್ಯಗಳನ್ನು ಕಂಡು ಹೆದರಿದ ಮಾನವ ಕ್ರಮೇಣ ಅವುಗಳನ್ನೇ ಪೂಜಿಸತೊಡಗಿದ. ಈ ಹಿನ್ನೆಲೆಯಲ್ಲಿ ಅವನು ಭಯಂಕರವೂ ಕ್ರೂರವೂ ಆದ ಪ್ರಾಣಿಪಕ್ಷಿಗಳನ್ನೂ ಆರಾಧಿಸಿದ್ದುಂಟು.

'Whatever the case, the Dravidians as an agricultural people, clearly worshipped duties connected in one way or another with fertility. Therewere two main elements in this, both analogous to Mesopotamian Cults. Phallic worship typified in the seals found at Harappa, which show a god seated with legs crossed and wearing bull's horns(the bull being a universal symbol of male potency) and the cult of mother goddesses, most plainly depicted on seals which show plants growing from the womb of a female weith or which show a naked doggess before whom a human sacrifig is being performed. Such figures are accompanied by animal ministrants, the goddess by that appears to be Half-Bull Half-Ram and the god by Deer, Birds an Elephant, a Tiger, A Rhinouroo and a Buffolo*- ಮೇಲಿನ ಹೇಳಿಕೆ ನಮ್ಮ ದೇವತೆಗಳ ಉಗಮ ಮತ್ತು ವಿಕಾಸದ ಒಂದು ಸ್ಪಷ್ಟ ಚಿತ್ರವನ್ನು ಕೊಡುತ್ತದೆ.

ಪ್ರಾಣಿಗಳಂತೆ ಗುಹೆಗಳಲ್ಲಿ ವಾಸಮಾಡಿಕೊಂಡಿದ್ದ ಮಾನವ ಕ್ರಮೇಣವಾಗಿ ವಿಕಾಸಗೊಂಡಿರುವುದನ್ನು ಮಾನವಶಾಸ್ತ್ರ ಹೇಳುತ್ತದೆ. ಮೊದಲು ತನ್ನ ಪರಿಸರದಲ್ಲಿ ದೊರೆಯುವ ಗೆಡ್ಡೆಗೆಣಸುಗಳನ್ನು ತಿನ್ನುತ್ತಿದ್ದ. ಈತ ಕ್ರಮೇಣ ಪ್ರಾಣಿಪಕ್ಷಿಗಳನ್ನು ಬೇಟೆಯಾಡಲಾರಂಭಿಸಿದುದು ಮಾನವವಿಕಾಸದಲ್ಲಿ ಮತ್ತೊಂದು ಮಹತ್ತರವಾದ ಹಂತ. ಈ ರೀತಿ ಬೇಟೆಯಾಡಲು ಆತ ಕಲಿತದ್ದು ಒಂದು ಮಹತ್ವದ ಹೆಜ್ಜೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. "ಬೇಟೆಯಾಡುವುದು, ಗೆಡ್ಡೆಗೆಣಸು ಸಂಗ್ರಹಿಸುವುದು, ಮೀನು ಹಿಡಿಯುವುದು ಮುಂತಾದ ಆಹಾರ ಸಂಪಾದನೆಯ ಮಾರ್ಗಗಳನ್ನು ಅನುಸರಿಸುತ್ತಿದ್ದ ಪ್ರಾಚೀನರು ಆಹಾರಾನ್ವೇಷಣೆಯಲ್ಲಿ ದೂರ ದೂರ ಅಲೆಯುತ್ತಿದ್ದರು. ಪ್ರಾಣಿಗಳನ್ನು

---

* Veronicalons Indian Mythology Page-6.

ಪಳಗಿಸಲು ಕಲಿತ ಅವರು ಮುಂದೆ ಕೃಷಿಯನ್ನು ಅವಲಂಬಿಸಿದಾಗ ಮಾನವ ವಿಕಾಸದಲ್ಲಿ ಒಂದು ದೊಡ್ಡ ಹೆಜ್ಜೆ ಇಟ್ಟಂತಾಯಿತು. ಈ ಕ್ರಾಂತಿ ನವಶಿಲಾಯುಗದಲ್ಲಿ ಅಂದರೆ ಕ್ರಿ. ಪೂ. ೧೦, ೦೦೦ ಸುಮಾರಿಗೆ ಆದಂತೆ ಕಾಣುತ್ತದೆ. ಮಣ್ಣನ್ನು ಅಗೆಯುವ ಕೋಲನ್ನೂ, ನೇಗಿಲನ್ನೂ ಬಳಸಿದಾಗ ಉಳುಮೆ ಪ್ರಾರಂಭವಾಯಿತು ಎನ್ನಬಹುದು. ಇದರಿಂದಾಗಿ ಮಾನವ ಒಂದು ಕಡೆ ನೆಲೆ ನಿಲ್ಲಲು ಸಾಧ್ಯವಾಯಿತು. ಸಾಗುವಳಿಯನ್ನು ನೋಡಿಕೊಳ್ಳಲು ಅದು ಅವಶ್ಯವೂ ಆಯಿತು. ಸುಮಾರು ೩೦೦೦ ವರ್ಷಗಳ ಅನಂತರ ಕ್ರಿ. ಪೂ. ೬೫೦೦ ಸುಮಾರಿಗೆ ಇರಾಕಿನಲ್ಲಿ ಸ್ಥಾಪಿತವಾದ ಗ್ರಾಮಗಳು ಸದ್ಯಕ್ಕೆ ನಮಗೆ ದೊರೆತಿರುವ ಪ್ರಾಚೀನ ಗ್ರಾಮಗಳು''.

ಭಾರತ ಅಂತೆಯೇ ಕರ್ನಾಟಕದ ನೆಲದಲ್ಲಿಯೂ ಈ ಗ್ರಾಮದ ಉದಯ. ''ಸಾಮಾಜಿಕ ವಿಕಾಸದ ಒಂದು ಮಹತ್ವದ ಹಂತ. ಅನಾಗರಿಕ ಮಾನವರು ನಾಗರಿಕತೆಯೆಡೆಗೆ ಮುನ್ನಡೆದ ಹೆಜ್ಜೆಯನ್ನದು ಗುರುತಿಸುತ್ತದೆ. ಸಂಸ್ಕೃತಿಯ ವೃದ್ಧಿಯೂ ಪೋಷಣೆಯೂ ಗ್ರಾಮವ್ಯವಸ್ಥೆಯಿಂದ ಸಾಧ್ಯವಾಯಿತೆನ್ನಬೇಕು. ಇಂದಿಗೂ ಪ್ರಪಂಚದ ಮುಕ್ಕಾಲು ಪಾಲು ಜನರನ್ನು ಗ್ರಾಮಗಳು ಪೋಷಿಸುತ್ತವೆ. ಅಲ್ಲದೆ ಉಳಿದ ಮತ್ತೊಂದು ಪಾಲಿನವರಿಗೆ ಆಹಾರವನ್ನೂ, ಕಚ್ಚಾಸಾಮಗ್ರಿಯನ್ನೂ ಒದಗಿಸುತ್ತವೆ. ೧೯೭೧ರ ಜನಗಣತಿಯಂತೆ ಭಾರತದಲ್ಲಿನ ಗ್ರಾಮಗಳ ಸಂಖ್ಯೆ ಐದೂವರೆ ಲಕ್ಷ. ಅಂದರೆ ದೇಶದ ಜನಸಂಖ್ಯೆಯ ೮೦.೧೩ ಭಾಗ ಜನರು ಗ್ರಾಮಗಳಲ್ಲಿ ವಾಸವಾಗಿದ್ದಾರೆ. ನಮ್ಮ ಧರ್ಮ ಮತ್ತು ಸಂಸ್ಕೃತಿಯ ಮೂಲಸೆಲೆ. ತಾಯಿ ಬೇರು ಇರುವುದು ನಮ್ಮ ಗ್ರಾಮಗಳಲಿ. ಅದರ ಅಧ್ಯಯನ ಅಲ್ಲಿಂದಲೇ ಆರಂಭವಾಗಬೇಕೆಂಬುದನ್ನು ನಿಸ್ಸಂದೇಹವಾಗಿ ತೋರಿಸುತ್ತದೆ.

ಗ್ರಾಮಗಳು ಉದಯವಾಗಿ, ಮನುಷ್ಯ ಒಂದು ಕಡೆ ನೆಲೆನಿಂತಮೇಲೆ ಅವುಗಳನ್ನು ಸ್ವಯಂಪೂರ್ಣಮಾಡಿಕೊಂಡನೆಂದು ಹೇಳಬೇಕು. ತನಗೆ ಅವಶ್ಯವಿರುವ ಯಾವುದಕ್ಕೂ ಗ್ರಾಮದಿಂದ ಆಚೆ ಅವಲಂಬಿಸಬಾರದಂತೆ ನೋಡಿಕೊಂಡ. ಅದರಲ್ಲಿ ಧರ್ಮ ಮತ್ತು ದೈವಗಳೂ ಸೇರುತ್ತವೆ. ಈ ಹಿನ್ನಲೆಯಲ್ಲಿ ಗ್ರಾಮದೇವತೆ ''ಗ್ರಾಮದ ಅಧಿಷ್ಠಾತ್ರಿ ದೈವವಾಗಿ, ಈ ದೈವವನ್ನು ಪ್ರತಿಯೊಂದು ಗ್ರಾಮದವರೂ ತಮ್ಮ ಗ್ರಾಮಕ್ಕಾಗಿ ಸೃಷ್ಟಿಸಿ ಸ್ಥಾಪಿಸಿ ಪೂಜಿಸಲು ಪ್ರಾರಂಭಮಾಡಿದುದರಿಂದ ಇದಕ್ಕೆ ಗ್ರಾಮದೇವತೆ ಎಂಬ ಹೆಸರು ಬಂದಿತು. ಭಾರತದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮದೇವತೆಯ ದೇವಸ್ಥಾನವಿದೆ. ಹಳ್ಳಿಗಳು ಅತಿ ಚಿಕ್ಕವೂ ಹತ್ತಿರವೂ ಆದಾಗ ಎರಡುಮೂರು ಹಳ್ಳಿಗಳಿಗೆ ಒಂದು ಗ್ರಾಮದೇವತೆಯ ದೇವಾಲಯ ಸ್ಥಾಪಿತವಾಗಿರುತ್ತದೆ. ನೂರಕ್ಕೆ ತೊಂಬತ್ತೊಂಬತ್ತು ದೇವಾಲಯಗಳು ಊರ ಹೊರಗಿರುತ್ತವೆ''. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಈ ಗ್ರಾಮದೇವತೆಗಳನ್ನು ಸೃಷ್ಟಿಸಿ ಪ್ರತಿಷ್ಠಾಪಿಸುತ್ತಾರೆನ್ನುವುದಕ್ಕಿಂತ ಅವು ನಾನಾ ಕಾರಣದಿಂದ ಆ ಜನರ ಮಧ್ಯದಿಂದಲೇ ಬಂದದ್ದೆಂದು ಕಂಡು ಬರುತ್ತದೆ.

ಕನ್ನಡ ನಾಡಿನಾದ್ಯಂತ ನೂರಾರು ಪ್ರಖ್ಯಾತ ಗ್ರಾಮದೇವತೆಗಳ ದೇವಾಲಯಗಳು ಕಂಡುಬರುತ್ತವೆ. ಈ ಎಲ್ಲಾ ದೇವತೆಗಳ ಮೂಲವೂ ಪಾರ್ವತಿಗೆ ಹೋಗುತ್ತದೆ.

ಶಕ್ತಿದೇವತೆಯ ವಿವಿಧರೂಪಗಳೇ ಈ ಎಲ್ಲಾ ದೇವತೆಗಳಿಗೆ ಮೂಲ ಎಂದೂ ಅಭಿಪ್ರಾಯವಿದೆ. ಪ್ರಾಚೀನ ದೈವವಿಕಾಸವೂ ಇದನ್ನು ಪ್ರತಿಪಾದಿಸುತ್ತದೆ. ಸಪ್ತಮಾತೃಕೆಯರಿಗೂ ಈ ದೇವತೆಗಳಿಗೂ ಸಂಬಂಧವನ್ನು ಕಲ್ಪಿಸಲಾಗಿದೆ. ಮೈಸೂರಿನ ಚಾಮುಂಡಿ, ಮೂಗೂರು ತಿಬ್ಬಾದೇವಿ, ಕೊಲ್ಲೂರು ಮೂಕಾಂಬಿಕೆ ಇಂತಹ ದೇವತೆಗಳಿಗೆಲ್ಲ ಏಳುಮಂದಿ ಅಕ್ಕ-ತಂಗಿಯರ ಕಥೆಯನ್ನು ಅನ್ವಯಿಸಲಾಗುತ್ತದೆ. ಇದು ನೇರವಾಗಿ ಸಪ್ತಮಾತೃಕೆಯರ ಕಲ್ಪನೆಯಿಂದಲೇ ಹುಟ್ಟಿಕೊಂಡ ಕಥೆ ಎಂಬುದರಲ್ಲಿ ಅನುಮಾನವಿಲ್ಲ.

ಅನೇಕ ಗ್ರಾಮದೇವತೆಗಳ ಸ್ಥಳಗತೆಗಳನ್ನು ನೋಡಿದರೆ ಅವು ಆಯಾ ಪ್ರದೇಶದ ವ್ಯಕ್ತಿ ಮೂಲವೂ ಆಗಿರುವಂತೆ ಕಾಣುತ್ತವೆ. ನಾನಾ ಕಾರಣಗಳಿಗಾಗಿ ಬಲಿಯಾದ ಆತ್ಮಾರ್ಪಣೆ ಮಾಡಿಕೊಂಡ, ಕೊಂಡವಾದ ಸತಿಯಾದವರು ಇಂತಹ ದೇವತೆಗಳಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಇನ್ನೊಂದು ಉತ್ತಮ ಜಾತಿಯ ಹೆಣ್ಣುಮಕ್ಕಳು ತಮಗರಿವಿಲ್ಲದೆ ಕೆಳಜಾತಿಯವನೊಬ್ಬನನ್ನು ಮದುವೆಯಾಗುವುದು, ಅವನು ಅಂತಹ ಜಾತಿಯವನೆಂದು ತಿಳಿದು ಆಕೆ ಮುನಿದು ಸಾಯುವುದು; ಆ ಮನೆತನದವರು ಆಕೆಗೆ ಹೆದರಿ, ಆಕೆಯನ್ನು ದೇವತೆಯನ್ನಾಗಿಸಿ ಪೂಜಿಸುವುದು ಇದಕ್ಕೆ ಸಂಬಂಧಿಸಿದಂತೆ ಎರಡು ಪ್ರಕಾರಗಳಿಗೂ ಎರಡು ಕತೆಯನ್ನು ಕೇಳಬಹುದು.

ಒಂದು ಊರಿನಲ್ಲಿ ಒಬ್ಬ ಪ್ರತಿಷ್ಠಿತ ಗೌಡನಿದ್ದ. ಆತನಿಗೆ ಏಳುಮಂದಿ ಗಂಡುಮಕ್ಕಳು ಮತ್ತು ಒಬ್ಬಳೇ ಮಗಳು. ಆಕೆ ಬಹಳ ಸುಂದರಿ. ಆಕೆಯ ತಲೆಗೂದಲು ಹಿಮ್ಮಡಿಯವರೆಗಿತ್ತು. ಆ ಮನೆಯಲ್ಲಿ ನೂರಾರು ಕರೆಯುವ ಹಸುಗಳಿದ್ದವು. ಒಂದು ದಿನ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ದನದಕೊಟ್ಟಿಗೆಯಿಂದ ಕರುಗಳು ಹೇಗೋ ಬೀದಿಗೆ ಬಂದವು. ಅದನ್ನು ಕಂಡ ಆ ಹೆಣ್ಣುಮಗಳು ಅವುಗಳನ್ನು ಒಳಗೆ ಅಟ್ಟಲು ಪ್ರಯತ್ನಿಸಿದಳು. ಅದೇ ಸಮಯಕ್ಕೆ ಅಲ್ಲಿಯೆ ಹೋಗುತ್ತಿದ್ದ ಆ ಊರಿನ ಪಾಳೇಗಾರ ಆ ಹುಡುಗಿಯ ಸೌಂದರ್ಯಕ್ಕೆ ಮಾರುಹೋಗಿ ಆಕೆಯನ್ನು ತನಗೆ ಕೊಟ್ಟು ಮದುವೆ ಮಾಡಿಕೊಡುವಂತೆ ಆಕೆಯ ತಂದೆಗೆ ಹೇಳಿಕಳಿಸಿದನು. ಆದರೆ ಆಕೆಯ ತಂದೆ ಜಾತಿಯ ಆಧಾರ ಕೊಟ್ಟು ತನ್ನ ಮಗಳನ್ನು ಕೊಡಲು ನಿರಾಕರಿಸುತ್ತಾನೆ. ಇದಕ್ಕೆ ಅಧಿಕಾರದ ಹಮ್ಮಿನ ಪಾಳಿಯಗಾರ ಬೆದರಿಕೆ ಹಾಕಿದರೂ ಬಗ್ಗುವುದಿಲ್ಲ. ಈ ವಿಷಯ ಆ ಯುವತಿಗೆ ತಿಳಿದು, ತನ್ನಿಂದಾಗಿ ತನ್ನ ಮನೆತನಕ್ಕೆ ಉಂಟಾದ ತೊಂದರೆಯನ್ನು ಗಮನಿಸಿ ದುಃಖದಿಂದ ಆತ್ಮಾರ್ಪಣೆ ಮಾಡಿಕೊಳ್ಳುತ್ತಾಳೆ. ತಮ್ಮ ಮನೆತನದ ಕೀರ್ತಿಗೌರವವನ್ನು ರಕ್ಷಿಸಲು ಆತ್ಮಾರ್ಪಣೆ ಮಾಡಿಕೊಂಡ ಆಕೆಯನ್ನು ಆ ಮನೆತನದವರು ಗೌರವದಿಂದ ನೆನೆಯುತ್ತಾರೆ. ಆಕೆಗೆ ಪೂಜೆಪುನಸ್ಕಾರಗಳನ್ನೂ ಸಲ್ಲಿಸುತ್ತಾರೆ. ಈ ಮನೆತನದವರು ರಾಜಮಹಾರಾಜರೋ, ಶ್ರೀಮಂತರೋ ಆಗಿದ್ದರೆ, ಅಲ್ಲಿಯೇ ಒಂದು ದೇವಾಲಯವನ್ನು ನಿರ್ಮಿಸುತ್ತಾರೆ. ಕ್ರಮೇಣ ಇಲ್ಲಿ ಪೂಜಾದಿಗಳು ಏರ್ಪಟ್ಟು, ಜಾತ್ರೆ, ತೇರುಗಳು ಆರಂಭವಾಗುತ್ತವೆ.

ಒಂದು ಊರಿನಲ್ಲಿ ಒಂದು ಬಡಬ್ರಾಹ್ಮಣ ಕುಟುಂಬ. ಅವರಿಗೆ ಸುಂದರಿಯಾದ ಒಬ್ಬಳೇ ಮಗಳು. ಬಡತನದ ಕಾರಣದಿಂದ ಆಕೆ ಋತುಮತಿಯಾಗುವ ಮೊದಲೇ

ಶಾಸ್ತ್ರಾನುಸಾರವಾಗಿ ಮದುವೆಮಾಡಲು ಆ ಬಡದಂಪತಿಗಳಿಗೆ ಆಗಲಿಲ್ಲ. ಆಕೆ ಋತುಮತಿಯಾಗಿಬಿಟ್ಟಿದ್ದರಿಂದ, ಅವರ ಸಂಪ್ರದಾಯದಂತೆ ದೂರದ ಕಾಡಿಗೆ ಕಣ್ಣುಕಟ್ಟಿ ಬಿಟ್ಟು ಬಂದರು. ಅದೇ ಕಾಡಿನಲ್ಲಿ ಒಕ್ಕಲಿಗ ಹುಡುಗನೊಬ್ಬ ದನಕಾಯಲು ಬರುತ್ತಿದ್ದ. (ಇದು ಕುರುಬರು, ಹೊಲೆಯರು, ಮಾದಿಗರು ಎಂದೆಲ್ಲಾ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ದೇವತೆಗಳಿಗೆ ಸಂಬಂಧಿಸಿದಂತೆ ಬದಲಾಗುವುದುಂಟು) ಆತನೂ ಸುಂದರವಾಗಿದ್ದ. ಒಂದು ದಿನ ಆಕೆ, ಈತನ ಕಣ್ಣಿಗೆ ಬಿದ್ದಳು. ಹೀಗೇ ಭೇಟಿಯಾಗುತ್ತಾ ಕ್ರಮೇಣ ಅವರಲ್ಲಿ ಅನುರಾಗ ಮೂಡಿತು. ಗಾಂಧರ್ವ ರೀತಿಯಲ್ಲಿ ಪತಿ-ಪತ್ನಿಯರಾದರು. ಆಕೆ ಗರ್ಭವತಿಯಾದಳು. ಹೆರಿಗೆಯ ಸಮಯದಲ್ಲಿ ಹುಡುಗ ತಂದೆತಾಯಿಯರಿಗೆ ಈ ಸಂಗತಿ ತಿಳಿಸಿ, ಆಕೆಯನ್ನು ಮನೆಗೆ ಕರೆತಂದನು. ಆ ಹುಡುಗನ ತಂದೆತಾಯಂದಿರು ಆಕೆಯನ್ನು ಚೆನ್ನಾಗಿ ನೋಡಿಕೊಂಡರು. ಆಕೆ ಗಂಡುಮಗುವಿಗೆ ಜನ್ಮವಿತ್ತಳು. ಒಕ್ಕಲಿಗರಾದ ಅವರು ಬಾಣಂತಿಗೆ ಮಾಂಸದ ಅಡುಗೆ ಮಾಡಿ ಬಡಿಸಿದರು. ಆಗ ಈಕೆಗೆ ತಾನು ವರಿಸಿದ್ದು ಬೇರೆ ಜಾತಿಯವನನ್ನು ಎಂದು ತಿಳಿದು, ನೊಂದುಕೊಂಡು, ಆತ್ಮಾರ್ಪಣೆ ಮಾಡಿಕೊಂಡಳು. ಇದರಿಂದ ಆ ಮನೆಯುವರಿಗೆ ತಮಗೇನೋ ಕೇಡಾಗುವುದೆಂದು ಹೆದರಿ, ಆಕೆಗೊಂದು ದೇವಾಲಯ ಮಾಡಿ ಪೂಜಿಸಲಾರಂಭಿಸಿದರು. ಆಕೆಗೆ ಅವರ ಕನಸಿನಲ್ಲಿ ಬಂದು ಆ ಮನೆಯುವರ ದೇವತೆಯಾಗಿ ರಕ್ಷಿಸುವುದಾಗಿ ಭರವಸೆ ನೀಡಿದಳಂತೆ ಹೀಗೆ ಆ ಮನೆತನಕ್ಕೆ ಆಕೆ ಮನೆದೇವರಾದಳು.

ಈ ಹಿಂದೆ ಹೇಳಿದ ಕಥೆಗಳಲ್ಲದ ಅನೇಕ ದೇವತೆಗಳ ಕಥೆಗಳು ದೊರೆಯುತ್ತವೆ. ಗುಹೆಗಳಲ್ಲಿ, ಹುತ್ತಗಳಲ್ಲಿ ಇರುವುದಾಗಿ ಭಕ್ತರಿಗೆ ಸೂಚಿಸಿ ಅಲ್ಲಿ ದೇವಾಲಯ ನಿರ್ಮಾಣವಾದಂತ ಕಥೆಗಳಿವೆ. ಬೇರೆಲ್ಲಿಂದಲೋ ತಂದು ಸ್ಥಾಪಿಸಿದ ದೇವತೆಗಳಿದ್ದಾರೆ. ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಬಂದಾಗ ತಮ್ಮ ದೇವತೆಗಳನ್ನು ತಮ್ಮೊಂದಿಗೆ ತಂದು ತಾವು ನಿಂತಲ್ಲಿ ಪ್ರತಿಷ್ಠಾಪಿಸಿರುವಂಥ ದೇವತೆಗಳೂ ಇದ್ದಾರೆ. ಇಂತಹ ದೇವತೆಗಳ ಬಗ್ಗೆ ಮುಂದೆ ಅನೇಕ ರೀತಿಯ ಕಥೆಗಳು ಹುಟ್ಟಿಕೊಂಡಿರುವುದೂ ಕಂಡುಬರುತ್ತದೆ.

ಗ್ರಾಮದೇವತೆಗಳಲ್ಲಿ ಸಾಮಾನ್ಯವಾಗಿ ಹೆಣ್ಣುದೇವತೆಗಳೆಂದೇ ಹೆಚ್ಚು. ಇವುಗಳಲ್ಲಿ ಎರಡು ರೀತಿಯ ಆಹಾರ ಪಾನೀಯ ನಿಷ್ಠೆನಿಯಮಗಳನ್ನುಳ್ಳ ದೇವತೆಗಳನ್ನು ಕಾಣುತ್ತೇವೆ. ಕೆಲವು ದೇವತೆಗಳು ಶಾಖಾಹಾರಿ ದೇವತೆಗಳು. ಇನ್ನು ಕೆಲವು ಮಾಂಸಾಹಾರಿ ದೇವತೆಗಳ ಹಬ್ಬ-ಹರಿದಿನಗಳಲ್ಲಿ ಮಾಂಸಾಹಾರದ ಅಡುಗೆ ಮಾಡುತ್ತಾರೆ. ದೇವತೆಗೆ ಬಲಿ ಕೊಡುವುದಲ್ಲದೆ, ಮಾಂಸದ ಅಡುಗೆಯ ಎಡೆಯನ್ನು ಹಾಕುತ್ತಾರೆ. ಕೆಲವು ದೇವತೆಗಳು ಕುರಿ, ಕೋಳಿಯ ಬಲಿ ಬಯಸಿದರೆ ಕೆಲವು ಕೋಣವನ್ನು ಅಪೇಕ್ಷಿಸುತ್ತವೆ. ಶಾಖಾಹಾರಿ ದೇವತೆಗಳು ಹಬ್ಬಹರಿದಿನಗಳಲ್ಲಿ ಮಾಂಸಾಹಾರ ಬಲಿ ಇತ್ಯಾದಿ ಇರುವುದಿಲ್ಲ. ಅವುಗಳನ್ನು ಚೊಕ್ಕ ಭೋಜನ ದೇವತೆಗಳೆಂದೂ ಕರೆಯುತ್ತಾರೆ. ಹಬ್ಬದ ಮೂರುದಿನ ಮಾಂಸಾಹಾರಿಗಳಾದರೂ ಮುಟ್ಟು-ಚಿಟ್ಟು ಮಾಡುವುದಿಲ್ಲ. ಆದರೆ ಈ ದೇವತೆಯ ಬಂಟರಿಗೆ ಬಲಿ ಮತ್ತು ಮಾಂಸಾಹಾರಗಳುಂಟು.

ಸಾಮಾನ್ಯವಾಗಿ ಗ್ರಾಮದೇವತೆಯ ಪೂಜಾರಿಗಳು ಒಕ್ಕಲಿಗರು, ಕುರುಬರು, ತೊರೆಯರು, ಹೊಲೆಯರೇ ಆಗಿರುತ್ತಾರೆ. ಈ ದೇವತೆಗಳಿಗೆ ಬ್ರಾಹ್ಮಣ ಪೂಜಾರಿಗಳು ಇರುವುದಿಲ್ಲ. ಆದರೆ ಇಂತಹ ದೇವತೆಯ ಭಕ್ತರು ಪ್ರತಿಷ್ಠರಾದಾಗ ಅಂತಹವರು ಬ್ರಾಹ್ಮಣ ಪೂಜಾರಿಗಳನ್ನು ನೇಮಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ, ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಇಲ್ಲಿದ್ದ ಶೂದ್ರಪೂಜಾರಿಯನ್ನು ತೆಗೆದು, ಬ್ರಾಹ್ಮಣ ಪೂಜಾರಿಯನ್ನು ನೇಮಿಸಲಾಯಿತೆಂದು ಸಂಶೋಧಕರು ಹೇಳಿದ್ದಾರೆ. ಆದರೂ ಇಂದಿಗೂ ಅನೇಕ ಗ್ರಾಮದೇವತೆಗಳನ್ನು ಪೂಜೆ ಮಾಡುವವರು, ಅಲ್ಲಿಯ ಜನರೇ.

ಕರ್ನಾಟಕ ಗ್ರಾಮದೇವತೆಗಳನ್ನು ಕುರಿತಂತೆ ಮತ್ತೊಂದು ಮಾತನ್ನು ಹೇಳಬಹುದು. ಬಹುತೇಕ ದೇವಾಲಯಗಳಲ್ಲಿ ಅಕ್ಕಪಕ್ಕದಲ್ಲಿಯೇ ಗುಡಿ ಇದ್ದು, ಒಂದನ್ನು ದೊಡ್ಡಮ್ಮ ಎಂದೂ, ಮತ್ತೊಂದನ್ನೂ ಚಿಕ್ಕಮ್ಮ ಎಂದೂ ಕರೆಯುತ್ತಾರೆ. ಚಿಕ್ಕಮ್ಮನನ್ನು ಹರಿಜನರು ಪೂಜಿಸುತ್ತಾರೆ. ದೊಡ್ಡಮ್ಮ ಮಿಕ್ಕೆಲ್ಲ ಗ್ರಾಮೀಣರ ದೇವತೆ. ಆದರೆ ಮಿಕ್ಕವರಿಗೂ ಹರಿಜನರು ವಾದ್ಯ ವಿಶೇಷಗಳನ್ನು ಬಡಿಯುತ್ತಾರೆ. ವಾಸ್ತವವಾಗಿ ಗ್ರಾಮದೇವತೆಯ ಶಕ್ತಿ ಮತ್ತು ಮಹಿಮೆಯನ್ನು ಕುರಿತು ಹಾಡುವವರಲ್ಲಿ ಹರಿಜನರೇ ಹೆಚ್ಚು. ಈ ಎಲ್ಲರೂ ಹಬ್ಬ ಮತ್ತು ಜಾತ್ರೆಗಳನ್ನು ಒಟ್ಟಿಗೇ ಆಚರಿಸುತ್ತಾರೆ.

ಸಾಮಾನ್ಯವಾಗಿ ಪ್ರತಿವರ್ಷ ಸುಗ್ಗಿಯ ನಂತರ ಬೇಸಿಗೆಯ ದಿನಗಳಲ್ಲಿ ಗ್ರಾಮದೇವತೆಯ ಹಬ್ಬ ಮತ್ತು ಜಾತ್ರೆಗಳು ನಡೆಯುತ್ತವೆ. ಆಗ ಗ್ರಾಮಾಂತರದವರಿಗೆ ವ್ಯವಸಾಯದ ಕೆಲಸಗಳಿಲ್ಲದೆ ಅವರು ಬಿಡುವಾಗಿರುತ್ತಾರೆ. ಇವು ವರ್ಷಕೊಮ್ಮೆ ಮಾತ್ರ ನಡೆಯುತ್ತವೆ. ಕೆಲವು ಕಡೆ ಹಬ್ಬ-ಜಾತ್ರೆಯ ನಂತರ ದೇವಾಯಲದ ಬಾಗಿಲು ಮುಚ್ಚಿದರೆ ಮತ್ತೆ ಮಾರನೆಯ ವರ್ಷವೇ ತೆರೆಯುವುದು. ಹೀಗೆ ಕರ್ನಾಟಕಾದ್ಯಂತ ವೈವಿಧ್ಯಮಯ ಹಿನ್ನಲೆಯ ಗ್ರಾಮದೇವತೆಗಳನ್ನು ಕಾಣಬಹುದು.

* * * * *

## ಪ್ರಾಚೀನ

ಗವಿರಂಗ ದೇವಾಲಯದ ಕ್ಷೇತ್ರದಿಂದ ಪಶ್ಚಿಮಕ್ಕೆ ಬಿಲ್ಲೇನಹಳ್ಳಿಯ ಮೂಲಕ ನಾಲ್ಕು ಕಿ. ಮೀ. ಹೋದರೆ ಹೆತ್ತಗೋನಹಳ್ಳಿ ಮಾಯಮ್ಮನ ದೇವಾಲಯ ಸಿಗುತ್ತದೆ. ಊರಿನಿಂದ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಈ ದೇವಾಲಯ ಇದೆ. ಸುತ್ತಲೂ ಪ್ರಾಕಾರವಿರುವ ಸಾಧಾರಣ ಗಾತ್ರದ ಗುಡಿಯಿದೆ. ದ್ರಾವಿಡ ಕಲಾ ಮಾದರಿಯಂತೆ ಕಂಡರೂ ವಿಜಯನಗರದ ಕಾಲದ ದೇವಾಲಯವಿರಬಹುದೆಂದು ಊಹಿಸಲು ಅವಕಾಶವಿದೆ. ಗರ್ಭಗುಡಿಯ ಮೇಲೆ ಸಣ್ಣಗೋಪುರವಿದೆ. ಯಾವುದೇ ಕಲಾಕುಸುರಿಯ ಕೆಲಸ ಇದರಲ್ಲಿ ಇಲ್ಲ. ಮುಂದೆ ಕೆಲವು ಕಲ್ಲುಮಂಟಪಗಳಿವೆ. ಅಲ್ಲಲ್ಲಿ ಮರಗಳನ್ನು ಬೆಳಸಲಾಗಿದೆ. ಗರ್ಭಗುಡಿಗೆ ನೇರವಾಗಿ ಪ್ರಾಕಾರದ ಆಚೆ ಕಲ್ಲಿನಿಂದ ಕಟ್ಟಿದ ಓಕಳಿಬಾವಿ ಇದೆ. ಪೂರ್ವದಿಕ್ಕಿಗೆ ಬಾಗಿಲಿರುವ ದೇವಾಲಯದ ಬಲಭಾಗದಲ್ಲಿ ಒಂದು ಸಣ್ಣಗುಡಿ ಇದೆ. ಇದು ಹರಿಜನರು ಪೂಜಿಸುವ ಸ್ಥಳ. ಗರ್ಭಗುಡಿಯಲ್ಲಿ ಒಂದು ಹುತ್ತವಿದೆ. ಅದರ ಮುಂಭಾಗದಲ್ಲಿ ಜೇಡಿಮಣ್ಣಿನಿಂದ ಮಾಡಿದ ಕುಳಿತ ಶೈಲಿಯ ದೇವತೆಯ ಮೂಲಗ್ರಹವಿದೆ. ಗರ್ಭಗುಡಿಯ ಎರಡೂ ಪಕ್ಕದಲ್ಲಿ ದೇವತೆಯ ಬಂಟರ ಬೃಹದಾಕಾರದ ವಿಗ್ರಹಗಳನ್ನು ನಿಲ್ಲಿಸಲಾಗಿದೆ. ಇದಲ್ಲದೆ, ಮೆರೆಯುವ ವಿಗ್ರಹಗಳು ಅವುಗಳಿಗೆ ಸಂಬಂಧಿಸಿದ ವಾಹಗಳೂ ಸಹ ದೇವಾಲಯದ ಎಡಭಾಗದಲ್ಲಿದೆ. ಇದಿಷ್ಟೂ ಹೆತ್ತಗೋನಹಳ್ಳಿ ಮಾಯಮ್ಮ ಕ್ಷೇತ್ರದ ಒಂದು ಚಿತ್ರ.

ಹೆತ್ತಗೋನಹಳ್ಳಿ ಮತ್ತು ಈ ದೇವತೆಯ ಪ್ರಾಚೀನತೆಗೆ ಸಂಬಂಧಿಸಿದ ದಾಖಲೆಗಳಾವುವೂ ಇಲ್ಲಿ, ದೊರೆಯುವುದಿಲ್ಲ. ಪೂಜಾರರು ಮತ್ತು ದೇವಾಲಯದ ವಿವಿಧ ಹಕ್ಕುದಾರರು ಹೇಳುವ ಕಥೆಗಳು ಪೌರಾಣಿಕವಾಗಿದ್ದು ನಮ್ಮ ಎಲ್ಲಾ ದೇವತೆಗಳಿಗೂ ಅನ್ವಯವಾಗುವಂತಹವು. ಸುಮಾರು ಹದಿನಾರನೆಯ ಶತಮಾನದ ಶಾಸನವೊಂದರಲ್ಲಿ ಎತ್ತುಗೋಡನ ಹಳ್ಳಿಯ ಉಲ್ಲೇಖ ದೊರೆಯುತ್ತದೆ. ಈ ಊರಿನಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಎತ್ತುಗಳ ವ್ಯಾಪಾರ ಮಾಡುತ್ತಿದ್ದ ಕಥೆಗಳನ್ನು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಇದು ಎತ್ತುಗೌಡನಹಳ್ಳಿ: ಎತ್ತುಗೊಂಡನಹಳ್ಳಿ- ಹೆತ್ತಗೋನಹಳ್ಳಿ ಆಗಿರಬಹುದು. ಎತ್ತುಗಳ ಮೇಲೆ ವ್ಯಾಪಾರ ಮಾಡುತ್ತಿದ್ದ ಅಥವಾ ಎತ್ತಿನ ವ್ಯಾಪಾರ ಮಾಡುತ್ತಿದ್ದ ಯಾವುದೋ ಗೌಡ ಈ ಹಳ್ಳಿಯನ್ನು ನಿರ್ಮಿಸಿ ಇಲ್ಲಿ ನೆಲೆನಿಂತಿರಬೇಕು. ಆದುದರಿಂದ ಇದಕ್ಕೆ ಎತ್ತುಗೌಡನ ಹಳ್ಳಿ ಎಂದು ಹೆಸರು ಬಂದಿರಬೇಕೆಂದು ಊಹಿಸಲವಕಾಶವಿದೆ. ಹನ್ನೆರಡನೆಯ ಶತಮಾನದ ತೋಣ್ಣೂರಿನ ಒಂದು ಶಾಸನದಲ್ಲಿ ಗೊರವಿಗ್ರಾಮದ ಉಲ್ಲೇಖವಿದೆ. ಆ ಊರು ಹಾಳಾಗಿತ್ತೆಂದು ಮತ್ತೆ ಅದನ್ನು ಜೀರ್ಣೋದ್ಧಾರ ಮಾಡಲಾಯಿತೆಂದೂ ತಿಳಿದು ಬರುತ್ತದೆ. ಗೊರವಿಯನ್ನು ಈ ದೇವತೆಯ ಭಕ್ತರ ಒಂದು ಹಳ್ಳಿಯೆಂದು ಕರೆಯುತ್ತಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಹೆತ್ತಗೋನಹಳ್ಳಿ ಮಾಯಮ್ಮ ದೇವಾಲಯ ಮತ್ತು ದೇವತೆಯ ಪ್ರಾಚೀನತೆಯನ್ನು ಕುರಿತು ಪರಿಶೀಲಿಸಬೇಕಾಗುತ್ತದೆ.

ಉತ್ತರ ದೇಶದಿಂದ ಕೆಲವು ಗೌಡವರ್ತಕರು ತಮ್ಮ ಎತ್ತುಗಳ ಮೇಲೆ ಮುತ್ತುರತ್ನ ಹೇರಿಕೊಂಡು ವ್ಯಾಪಾರ ಮಾಡುತ್ತಾ ಬಂದರು. ಹಾಗೆ ಬರುವಾಗ ಒಂದು ದಿನ ಈಗ ಹೆತ್ತಗೋನಹಳ್ಳಿ ಮಾಯಮ್ಮನ ದೇವಾಲಯ ಇರುವ ತೋಪಿನಲ್ಲಿ ಅವರೆಲ್ಲಾ ಬೀಡುಬಿಟ್ಟರು. ಅಡುಗೆಗೆ ಒಲೆ ಹೂಡಲು ಸೂಕ್ತ ಸ್ಥಳ ಹುಡುಕುವಾಗ ಎತ್ತರವಾಗಿ ಬೆಳೆದ ಹುತ್ತವೊಂದು ಅವರ ದೃಷ್ಟಿಗೆ ಬಿತ್ತು. ಗಾಳಿಗೆ ಮರೆಯೂ ಆಯಿತೆಂದು ಅದರ ಹತ್ತಿರ ಒಲೆ ಹೂಡಿ ಅಡುಗೆ ಮಾಡಿದರು. ಆ ವ್ಯಾಪಾರಿಗಳ ಗುಂಪಿನಲ್ಲಿ ಏಳುಜನರಿದ್ದರಂತೆ. ಸರದಿಯಂತೆ ಒಬ್ಬೊಬ್ಬರು ಒಂದೊಂದು ದಿನ ಅಡುಗೆ ಮಾಡಿ ಇತರರಿಗೆ ಬಡಿಸಿ ಅನಂತರ ಅವನು ಉಣ್ಣಬೇಕು. ಅದರಂತೆ ಅಂದು ಅಡುಗೆ ಮಾಡಿದವನು ಮಿಕ್ಕ ಆರುಮಂದಿಗೆ ಬಡಿಸಿದ. ಊಟಮಾಡಿದ ಅವರೆಲ್ಲರೂ ಸತ್ತು ನೆಲಕ್ಕೊರಗಿದರು. ಅಡಿಗೆ ಮಾಡಿದವನು ಗಾಬರಿಗೊಂಡು. ತನ್ನಿಂದ ಏನೋ ಅಚಾತುರ್ಯವಾಗಿದೆ ಎಂದು ದುಃಖಿಸಿದ. ಏನು ಮಾಡಬೇಕೆಂದು ತಿಳಿಯದೆ ದಿಕ್ಕು ದಿಕ್ಕಿಗೆ ತಿರುಗಿ ತಾನು ಕಂಡುಕೇಳಿದ ದೇವತೆಗಳಿಗೆಲ್ಲಾ ಹರಿಕೆ ಹೇಳಿಕೊಂಡ. ಏನೂ ಪ್ರಯೋಜನವಾಗಲಿಲ್ಲ. ಅಷ್ಟರಲ್ಲಿ ಕತ್ತಲಾದುದರಿಂದ ಬೆಳಿಗ್ಗೆ ತನ್ನ ಮಿತ್ರರಿಗೆಲ್ಲಾ ಸಂಸ್ಕಾರ ನಡೆಸಿದರಾಯಿತೆಂದು ಮಲಗಿದ. ರಾತ್ರಿ ಅವನ ಕನಸಿನಲ್ಲಿ ದೇವತೆಯೊಬ್ಬಳು ಕಾಣಿಸಿಕೊಂಡು ತಾನು ಆ ಹುತ್ತದಲ್ಲಿರುವುದಾಗಿಯೂ ಅಡುಗೆ ಮಾಡಿ ಅಲ್ಲಿ ಹೊಲಸು ಮಾಡಿದುದರಿಂದ ಅವರು ಸತ್ತು ಹೋದರೆಂದೂ. ಈಗ ತನಗೆ ಒಂದು ಗುಡಿಕಟ್ಟಿಸಿದರೆ ಅವರೆಲ್ಲರೂ ಬದುಕುವರೆಂದೂ ಮುಂದೆ ಈ ಏಳೂಜನ ಶೆಟ್ಟಿಗೌಡರೂ ತಮ್ಮ ಭಕ್ತರಾಗಿರಬೇಕೆಂದೂ ಪ್ರತಿ ವರ್ಷ ತನಗೆ ಹಬ್ಬ ಮಾಡಿ ತನ್ನ ಮಹಿಮೆಯನ್ನು ನೆನಪಿಸಿಕೊಳ್ಳಬೇಕೆಂದೂ ಆಜ್ಞಾಪಿಸಿದಳಂತೆ.

ಮಾರನೆಯ ದಿನ ಎದ್ದು ಶೆಟ್ಟಿಗೌಡ ಪಕ್ಕದ ಕೆರೆಗೆ ಹೋಗಿ ಸ್ನಾನಮಾಡಿ ಬಂದು ದೇವಿಯ ಆಸೆಯನ್ನು ಪೂರೈಸುವುದಾಗಿ ಒಪ್ಪಿಕೊಂಡ. ಆ ಕೂಡಲೇ ಮಿಕ್ಕ ಆರು ಜನರೂ ನಿದ್ರೆ ತಿಳಿದೆದ್ದವರಂತೆ ಎದ್ದು ಕುಳಿತರು. ಅವರಿಗೆ ದೇವತೆಯ ಆಜ್ಞೆಯನ್ನು ಆತ ತಿಳಿಸಿದ. ಅವರೆಲ್ಲರೂ ಮಿಂದು ದೇವಿಗೆ ಪೂಜೆ ಸಲ್ಲಿಸಿ ಆಕೆಯ ಆಜ್ಞೆಯನ್ನು ಪಾಲಿಸುವುದಾಗಿ ಒಪ್ಪಿದರು. ಅದರಂತೆ ಅವರೆಲ್ಲ ಅಲ್ಲಿಯೇ ನಿಂತು ದೇವಾಲಯದ ಕೆಲಸ ಆರಂಭಿಸಿದರು. ಆ ಎತ್ತಿನ ವ್ಯಾಪಾರದ ಗೌಡರು ಸ್ಥಾಪಿಸಿದ ಹಳ್ಳಿಯೇ ಹೆತ್ತಗೋನಹಳ್ಳಿಯಾಯಿತು.

ಎರಡನೆಯ ಕಥೆ, ಹೆತ್ತಗೋನಹಳ್ಳಿಯ ತೋಪಿನ ಹುತ್ತದಲ್ಲಿ ಎಲ್ಲಿಂದಲೋ ದೇವತೆಯೊಬ್ಬಳು ಬಂದು ಸೇರಿಕೊಂಡಿದ್ದಳು. ಆ ಊರಿನ ಹುಡುಗರು ತಮ್ಮ ದನಕರುಗಳನ್ನು ಮೇಯಿಸಲು ಆ ಕಡೆಗೆ ಹೊಡೆದುಕೊಂಡು ಹೋಗುತ್ತಿದ್ದರು. ಅವುಗಳಲ್ಲಿದ್ದ ಹಸುವೊಂದು ದಿನವೂ ಆ ಹುತ್ತಕ್ಕೆ ಹಾಲುಕರೆಯುತ್ತಿತ್ತು. ಮನೆಯವರು ದನಕಾಯುವ ಹುಡುಗನ ಬಗ್ಗೆ ಅನುಮಾನಪಟ್ಟರು. ಹುಡುಗನು ಶಿಕ್ಷೆಯನ್ನು ತಡೆಯಲಾರದೆ ಆ ಹಸುವಿನ ಚಲನವಲನವನ್ನು ಕಾಯ್ದು. ಹಸು ಹುತ್ತಕ್ಕೆ ಹಾಲು ಕರೆಯುವ ಸಂಗತಿ ಅವನಿಗೆ ತಿಳಿಯಿತು. ಈ ವಿಚಾರವನ್ನು ಹುಡುಗ ತನ್ನ ಯಜಮಾನರಿಗೆ ತಿಳಿಸಿದ.ಅವರೂ ಬಂದು ನೋಡಿದರು. ಆಮೇಲೆ ಭಕ್ತಿಯಿಂದ ಪೂಜಿಸಿದರು. ಆಗ ದೇವತೆ

ಕನಸಿನಲ್ಲಿ ಬಂದು ತನಗೊಂದು ದೇವಾ..ಯ ಕಟ್ಟಿಸುವಂತೆ ಸೂಚಿಸಿದಳು. ಊರವರೆಲ್ಲ ಸೇರಿ ದೇವಾಲಯ ಕಟ್ಟಿಸಿದರು.

ಈ ದೇವತೆಯ ಉಗಮದ ಬಗ್ಗೆ ದೊರೆಯುವ ಎರಡೂ ಕಥೆಗಳೂ ನಮ್ಮ ದೇವದೇವತೆಗಳ ಉಗಮದ ಬಗ್ಗೆ ದೊರೆಯುವ ಕಥೆಗಳೆ. ಎರಡನೆಯ ಕಥೆಯೂ ಇಲ್ಲಿಗೆ ಹತ್ತಿರದಲ್ಲೇ ಇರುವ ಗವಿರಂಗಪ್ಪನ ಉಗಮದ ಕಥೆಯೂ ಒಂದೇ ರೀತಿ ಇರುವುದನ್ನು ಕಾಣಬಹುದು. ಅಷ್ಟೇ ಅಲ್ಲ ಈ ಕಥೆ ಯಡೆಯೂರು ಸಿದ್ಧಲಿಂಗೇಶ್ವರ, ಸಾಸಲು ಶಂಭುಲಿಂಗೇಶ್ವರ ಕ್ಷೇತ್ರಗಳ ಬಗ್ಗೆಯೂ ಇರುವುದನ್ನು ಕಾಣಬಹುದು. ಹಾಗೆಯೇ ಒಂದನೆಯ ಕಥೆಯೂ ಕರ್ನಾಟಕದ ಅನೇಕ ಗ್ರಾಮದೇವತೆಗಳ ಬಗೆಗೆ ಇರುವುದನ್ನು ಕಾಣುತ್ತೇವೆ. ಈ ದೇವಾಲಯದಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಒಂದು ಹಳ್ಳ ಹರಿಯುತ್ತದೆ. ಇದನ್ನು ಇಸಂಪರಿ ಹಳ್ಳ ಎನ್ನುತ್ತಾರೆ. ಈ ಹಳ್ಳದ ನೀರು ಕುಡಿದರೆ ವಿಷಪರಿಹಾರವಾಗುತ್ತಿತ್ತಂತೆ. ಈಗ ಕಲಿಕಾಲವಾದ್ದರಿಂದ ಆ ಶಕ್ತಿ ಹೋಗಿದೆಯಂತೆ. ಅದೇನೇ ಇರಲಿ, ವಿಷ ಪರಿಹಾರ ಕಳ್ಳಿ ವಿಷಪರಿಹಳ್ಳ ಆಗಿರಬಹುದೆಂದು ಕಾಣುತ್ತದೆ. ಈ ಹಳ್ಳದ ಪಕ್ಕದಲ್ಲಿ ಸಮಾಧಿಯಂತಹ ಸ್ಥಳವೊಂದಿದೆ. ಇದೇ ದೇವಾಲಯದ ಮೂಲಸ್ಥಳ ಎಂದೂ ಹೇಳುತ್ತಾರೆ. ದೇವಾಲಯದಲ್ಲಿ ಪೂಜೆ ಸಲ್ಲಿಸುವವರೆಲ್ಲ ಅಲ್ಲಿಯೂ ಪೂಜೆ ಸಲ್ಲಿಸಬೇಕೆಂಬ ನಿಯಮವಿದೆ. ಈ ಹಿನ್ನಲೆಯಲ್ಲಿ ಯೋಚಿಸಿದಾಗ ಅಲ್ಲಿ ಹೆಣ್ಣು ಮಗಳೊಬ್ಬಳು ಸತಿಯಾಗಿರುವ ಸಾಧ್ಯತೆಗಳೂ ಕಂಡುಬರುತ್ತವೆ.

ಮೇಲಿನ ಸತಿಯಾದ ಕಥೆಗೆ ಪೋಷಕವಾಗಿ ಕಥೆಯೊಂದು ಹೀಗಿದೆ. ಏಳು ಜನ ಗೌಡಯುವಕರು ಒಬ್ಬ ಹೆಣ್ಣುಮಗಳನ್ನು ಅಪಹರಿಸಿಕೊಂಡು ಹೊರಟರು. ಈ ವಿಷಯ ತಿಳಿದ ಆಕೆಯ ಮನೆಯವರು ಇವರನ್ನು ಅಟ್ಟಿಸಿಕೊಂಡು ಬಂದರು. ಇವರು ಮುಂದೆ, ಅವರು ಹಿಂದೆ. ಈ ಸ್ಥಳಕ್ಕೆ ಬರುವ ಹೊತ್ತಿಗೆ ಅವರ ಕೈಗೆ ಸಿಕ್ಕಿಹಾಕಿಕೊಳ್ಳುತ್ತೇವೆಂಬ ಹೆದರಿಕೆ ಈ ಏಳು ಜನರಿಗುಂಟಾಯಿತು. ಆಗ ಆ ಏಳೂ ಜನರೂ ಆ ಹೆಣ್ಣುಮಗಳ ಮರೆಹೋಗಿ ತಮ್ಮನ್ನು ಕಾಪಾಡುವಂತೆ ಪ್ರಾರ್ಥಿಸಿದರು. ಅದರಂತೆ ಅವರನ್ನು ಹುತ್ತದ ಮರೆಯಲ್ಲಿ ಅವಿಸಿಟ್ಟು ಆಕೆ ಅವರನ್ನು ಕಾಪಾಡಿದಳು. ಮುಂದೆ ಆ ಏಳೂ ಜನರು ಏಳೂರುಗಳನ್ನು ಕಟ್ಟಿಕೊಂಡು ಅಲ್ಲಿಯೇ ನಿಂತರು. ಈ ಹೆಣ್ಣುಮಗಳು ಅವರಿಗೆಲ್ಲಾ ದೇವತೆಯಾದಳು.

ಹೆತ್ತಗೋನಹಳ್ಳಿ ಮಾಯಮ್ಮನ ಉಗಮದ ಬಗೆಗಿನ ಎಲ್ಲಾ ಕಥೆಗಳನ್ನು ಗಮನಿಸಿದರೆ ಸತಿಯಾಗಿ ಈಕೆ ದೇವತೆಯಾಗಿದ್ದಳೆಂಬುದೇ ಹೆಚ್ಚು ಸೂಕ್ತವಾದ ಮೂಲವಾಗಿರಬೇಕೆನ್ನಿಸುತ್ತದೆ. ಎತ್ತುಗಳ ಮೇಲೆ ಹೇರುತಂದಿದ್ದ ಶೆಟ್ಟಿಗೌಡರ ಕಥೆಯೇ ಇದಾಗಿರಬಹುದು. ವ್ಯಾಪಾರಕ್ಕೆಂದು ಬಂದ ಇವರು ಹೆಣ್ಣುಮಗಳೊಬ್ಬಳ ದುರಂತಕ್ಕೂ ಕಾರಣವಾಗಿರಬಹುದು. ಏಕೆಂದರೆ ಈಗಲೂ ಈ ಊರುಗಳಲ್ಲಿ ಶೆಟ್ಟಿಗೌಡ ಎಂಬ ಹೆಸರನ್ನು ಪ್ರಧಾನವಾಗಿ ಇಟ್ಟುಕೊಳ್ಳುವುದು ಕಂಡುಬರುತ್ತದೆ. ಉದಾಹರಣೆಗೆ, ಮಾಯೀಶೆಟ್ಟಿಗೌಡ, ಶೆಟ್ಟಿಗೌಡ, ಶೆಟ್ಟಿಗೌಡನ ನಂಜೇಗೌಡ ಇತ್ಯಾದಿ. ಈ ಒಂದು ದುರಂತ ಪ್ರಸಂಗದ ಸುತ್ತಲೂ ಅನೇಕ ಕಥೆಗಳು ಹುಟ್ಟಿಕೊಂಡಿವೆ. ಹಾಗೆಯೆ ಮಾಯಮ್ಮ ಹೆಸರು ಇಟ್ಟುಕೊಳ್ಳುವ

ಪದ್ಧತಿಯೂ ಇದೆ. ಈಕೆ ಬಿಲ್ಲೇನಹಳ್ಳಿಯ ಹೆಣ್ಣುಮಗಳೆಂದು ಪರಿಗಣಿಸಿರುವುದು ಮೇಲಿನ ಊಹೆಗೆ ಮತ್ತಷ್ಟು ಪುಷ್ಟಿ ನೀಡುತ್ತದೆ.

ಈ ದೇವತೆಯ ಭಕ್ತರಿರುವ ಏಳು ಊರುಗಳ ಪ್ರದೇಶವನ್ನು ಸುತ್ತಿದರೆ ಅನೇಕ ವೀರಗಲ್ಲುಗಳನ್ನು ಕಾಣುತ್ತೇವೆ. ಗೊರವಿ, ಬಿಲ್ಲೇನಹಳ್ಳಿಗಳಲ್ಲಿ ಆಳೆತ್ತರದ ವೀರಗಲ್ಲುಗಳು ಕಂಡು ಬರುತ್ತವೆ. ಆಮೇಲೆ ಗೊರವಿ ಯುದ್ಧವೊಂದರಿಂದ ಹಾಳಾಗಿ ಪುನರ್‌ನಿರ್ಮಾಣವಾಯಿತೆಂದು ಹೇಳುತ್ತಾರೆ. ಹಳೆಯ ಗೊರವಿಯ ಅವಶೇಷಗಳು ಈಗಲೂ ಕಂಡುಬರುತ್ತವೆ. ಮೂವತ್ತು-ನಲವತ್ತು ವರ್ಷಗಳಷ್ಟು ಹಿಂದೆ ಇಂತಹ ಸಾವಿರಾರು ವೀರಗಲ್ಲುಗಳಿದ್ದವೆಂದು ಹಿರಿಯರು ತಿಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಇದೊಂದು ಯುದ್ಧಭೂಮಿಯೆಂದು ತೀರ್ಮಾನಿಸಲು ಅವಕಾಶವಿದೆ. ಈ ಯುದ್ಧ ಮೇಲೆ ಹೇಳಿದ ಅಪಹಾರಿತ ಹೆಣ್ಣುಮಗಳ ಕಾರಣಕ್ಕಾಗಿ ನಡೆದಿರಬಹುದು. ತನ್ನಿಂದಾಗಿ ಆದ ಅನಾಹುತ ಕಂಡು ಆಕೆ ಸತಿಯಾಗಿರಬಹುದು, ಇಲ್ಲವೇ ಕೊಂಡದಲ್ಲಿ ಆತ್ಮಾರ್ಪಣೆ ಮಾಡಿಕೊಂಡಿರಬೇಕು.

ಈ ದೇವತೆಯ ಉಗಮದ ಬಗೆಗೆ ಯಾವುದೇ ದತ್ತಿ ಧರ್ಮದ ಶಾಸನಗಳು ದೊರೆಯವುದಿಲ್ಲ, ಪ್ರಾಯ: ರಾಜಮಹಾರಾಜರ ಪೋಷಣೆ ಇಲ್ಲದುದರಿಂದ ಹೀಗಾಗಿರಬಹುದು. ದೇವಾಲಯದ ಕಲಾಮಾದರಿಯ ಆಧಾರದಿಂದ ಹೇಳಬಹುದಾದರೆ ಇದು ವಿಜಯನಗರದ ಕಾಲದ ದೇವತೆಯೆಂದು ಹೇಳಬಹುದು. ಅಷ್ಟೇ ಈ ದೇವಾಲಯಗಳು ಸ್ಥಾಪಿತವಾದ ಕಾಲ ಯಾವುದು ಎಂಬುದಕ್ಕೆ ಐತಿಹಾಸಿಕ ಆಧಾರಗಳು ದೊರೆಯುವುದು ಅತಿಸ್ವಲ್ಪ. ಆದರೆ ಜನಪದದಲ್ಲಿ ರೂಢಿಯಲ್ಲಿರುವ ಮತ್ತು ಕೆಲವು ಗ್ರಾಮದೇವತೆಗಳ ಬಗ್ಗೆ ದೊರೆಯುವ ಐತಿಹ್ಯಗಳಿಂದ ಗ್ರಾಮ ಘಟಕಗಳು ಆರಂಭವಾದಂದಿನಿಂದಲೇ ಗ್ರಾಮದೇವತೆಯೂ ಅಸ್ತಿತ್ವಕ್ಕೆ ಬಂತು ಎಂದು ಹೇಳಬಹುದು. ಆದ್ದರಿಂದ ಗ್ರಾಮದೇವತೆಯ ಕಲ್ಪನೆ ಅತ್ಯಂತ ಪ್ರಾಚೀನ ಕಾಲಕ್ಕೆ ಅಂದರೆ ಆರ್ಯರು ಅನಾರ್ಯರು, ಉಪನಿಷತ್ತು, ವೇದಗಳು ಎಲ್ಲವುಗಳ ಹಿಂದಲ ಕಾಲಕ್ಕೆ ಸೇರಿದುದೆಂದು ಹೇಳಬಹುದು.

* * * * *

# ಏಳೂರ ದೇವತೆ

ಹೆತ್ತಗೋನಹಳ್ಳಿಯ ಮಾಯಮ್ಮನ ಮೂಲದ ಬಗೆಗಿನ ಕಥೆಯಂತೆ ಏಳುಜನ ಶೆಟ್ಟಿಗೌಡರು ಈಕೆಯ ಮರೆಹೊಕ್ಕರು. ಆ ಏಳುಜನರೂ ಈ ದೇವಾಲಯದ ಸುತ್ತಮುತ್ತಲೇ ನೆಲೆ ನಿಂತರು. ಹಾಗೆ ಅವರು ನೆಲೆ ನಿಂತ ಸ್ಥಳಗಳೇ ಮುಂದೆ ಊರುಗಳಾದವು. ಆ ವಂಶಸ್ಥರು ಬೆಳೆದಂತೆಲ್ಲಾ ಊರುಗಳೂ ಬೆಳೆದವು. ಈ ಏಳೂರು ಮತ್ತು ಏಳು ಮಂದಿಯ ಬಗ್ಗೆ ಇನ್ನೂ ಒಂದು ಕಥೆಯನ್ನು ಹೇಳುತ್ತಾರೆ. ಒಂದೂರಿನಲ್ಲಿ ಒಬ್ಬ ಗೌಡ. ಆತ ಭಾರಿಕುಳ. ಅವನ ಆಸ್ತಿಪಾಸ್ತಿ ದನಕರು ಎಮ್ಮೆ ಎತ್ತು ಲೆಕ್ಕವಿಲ್ಲ. ಅವನಿಗೆ ಏಳುಮಂದಿ ಗಂಡುಮಕ್ಕಳು ಮತ್ತು ಒಬ್ಬಳೇ ಹೆಣ್ಣುಮಗಳು. ತುಂಬಾ ಸುಖಸಂತೋಷದಿಂದ ಇದ್ದ ಸಂಸಾರ. ಆ ಊರಿನ ಪಾಳಿಯಗಾರ ಹಜಾಮರವನು. ಅವನು ಒಂದು ದಿನ ಈ ಗೌಡನ ಮಗಳನ್ನು ನೋಡಿ, ತನಗೆ ಆಕೆಯನ್ನು ಕೊಟ್ಟು ಮದುವೆ ಮಾಡಿ ಎಂದು ಕೇಳಿದ. ಇದನ್ನು ಇಷ್ಟಪಡದ ಆ ಸಂಸಾರ ಆ ಊರು ಬಿಟ್ಟು ಹೊರಟಿತು. ಆದರೆ ಪಾಳಿಯಗಾರನ ಕಡೆಯವರು ಇವರ ಬೆನ್ನು ಹತ್ತಿದರು. ಈ ಸ್ಥಳಕ್ಕೆ ಬಂದು ಈ ಸ್ಥಳದಲ್ಲಿದ್ದ ಹುತ್ತದ ಮರೆಯಲ್ಲಿ ಅವಿತುಕೊಂಡರು. ಆ ಪಾಳಿಯಗಾರನ ಕಡೆಯವರಿಂದ ಪಾರಾದರು. ಹುತ್ತದಲ್ಲಿದ್ದ ದೇವತೆ ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡಳು. ಸರಿ ಅವರೆಲ್ಲ ಆ ಸ್ಥಳದಲ್ಲೊಂದು ದೇವಾಲಯ ನಿರ್ಮಿಸಿ ಇಲ್ಲಿಯೇ ಸುತ್ತಮುತ್ತ ನೆಲೆ ನಿಂತರು. ಆ ಏಳು ಮಂದಿಯೆ ಈಕೆಯ ಪ್ರಥಮ ಭಕ್ತರು. ಆ ಏಳು ಊರುಗಳೇ ಬಿಲ್ಲೇನಹಳ್ಳಿ, ಗೊರವಿ. ಹೆತ್ತಗೋನಹಳ್ಳಿ, ದೊಡ್ಡ ಹಾರನಹಳ್ಳಿ, ಮಲ್ಲೇನಹಳ್ಳಿ, ಶಾರಹಳ್ಳಿ ಮತ್ತು ದಾಸನಪುರ.

ಬಿಲ್ಲೇನಹಳ್ಳಿ ಮಾಯಮ್ಮನ ದೇವಾಲಯದಿಂದ ಪೂರ್ವಕ್ಕೆ ಎರಡು ಕಿ. ಮೀ. ದೂರದಲ್ಲಿದೆ. ಗವಿರಂಗ ಕ್ಷೇತ್ರಕ್ಕೆ ಬಹಳ ಹತ್ತಿರ. ಸುಮಾರು ಮುನ್ನೂರುನಾನೂರು ಕುಟುಂಬಗಳಿರುವ ಈ ಹಳ್ಳಿಯ ಪ್ರಾಚೀನತೆಯ ಬಗೆಗೆ ಯಾವುದೇ ಶಾಸನ ಆಧಾರಗಳೂ ದೊರೆಯುವುದಿಲ್ಲ. ಊರಿನ ಜನಸಂಖ್ಯೆಯ ಮುಕ್ಕಾಲು ಭಾಗ ಜನ ಒಕ್ಕಲಿಗರು. ಮಿಕ್ಕವರು ಹರಿಜನರು. ವೈಷ್ಣವರ ಒಂದೆರಡು ಕುಟುಂಬಗಳೂ ಇವೆ ಎಂದು ತಿಳಿದುಬರುತ್ತದೆ. ಹೆತ್ತಗೋನಹಳ್ಳಿ ಮಾಯಮ್ಮ ಈ ಊರಿನವಳು. ಬಿಲ್ಲೇನಹಳ್ಳಿ ಅವಳ ತವರುಮನೆ ಎಂದು ಜನರು ನಂಬುತ್ತಾರೆ. ಇದಕ್ಕೆ ಅವರು ಯಾವುದೇ ಕಾರಣವನ್ನು ಕೊಡುವುದಿಲ್ಲ. ಊರಸುತ್ತಲಿನ ವೀರಗಲ್ಲುಗಳು ಇದೊಂದು ಪ್ರಾಚೀನವಾದ ಊರು ಎಂಬುದನ್ನು ಪ್ರತಿಪಾದಿಸುತ್ತವೆ. ಯಾವುದೋ ಭಯಂಕರ ಯುದ್ಧ ನಡೆದಿರುವ ಬಗ್ಗೆ ಸೂಚನೆ ನೀಡುತ್ತದೆ. ಹೆತ್ತಗೋನಹಳ್ಳಿ ಮಾಯಮ್ಮನ ಹಬ್ಬದಲ್ಲಿ ತೇರಿನ ಕುಜುತ ಮತ್ತು ಕಲಶ ತೆಗೆದುಕೊಂಡು ಹೋಗುವುದು ಈ ಊರಿನ ಹಕ್ಕು. ಊರಿಗೆ ದೇವರನ್ನು ತರುವಾಗ ಕುದುರೆ ವಾಹನದಲ್ಲಿ ತರುವುದೂ ಇವರ ಹಕ್ಕಂತೆ. ಹೆತ್ತಗೋನಹಳ್ಳಿ ಮಾಯಮ್ಮನ ಹಬ್ಬವನ್ನು ಈ ಊರಿನವರು ಅತ್ಯಂತ ನಿಷ್ಠೆಯಿಂದ ಆಚರಿಸುತ್ತಾರೆ.

ಗೊರವಿ ಹೆತ್ತಗೋನಹಳ್ಳಿ ಮಾಯಮ್ಮನ ಹಕ್ಕಿನ ಭಕ್ತರಿರುವ ಮತ್ತೊಂದು ಹಳ್ಳಿ. ದೇವಾಲಯದಿಂದ ಪಶ್ಚಿಮದಲ್ಲಿ ಇರುವ ಈ ಹಳ್ಳಿ ಒಮ್ಮೆ ನಾಶವಾಗಿ 'ಹಾಳುಗೊರವಿ' ಎಂದು ಶಾಸನಗಳಲ್ಲಿ ಉಕ್ತವಾಗಿದೆ. ಒಂದು ಕಾಲದಲ್ಲಿ ಇದು ಜೈನಧರ್ಮೀಯರಿಂದ ಕೂಡಿದ್ದ ಹಳ್ಳಿಯಾಗಿತ್ತಂತೆ. ಹಾಳಾಗಿ ಈಗ ಉಳಿದಿರುವ ದೇವಾಲಯಗಳ ಪಳಿಯುಳಿಕೆಗಳನ್ನು ಜೈನಬಸದಿಗಳೆಂದು ಗುರುತಿಸುತ್ತಾರೆ. ಈ ಊರಿಗೆ ಗೊರವಿ ಎಂದು ಏಕೆ ಹೆಸರು ಬಂದಿತೆಂದು ತಿಳಿದು ಬರುವುದಿಲ್ಲ. ಈಗ ಇರುವ ಊರು ಸಹ ಸಾಕಷ್ಟು ದೊಡ್ಡದೆ. ನೂರಿನ್ನೂರು ಮನೆಗಳ ಈ ಊರಿನ ಮಧ್ಯೆ ಮಾರಿಗುಡಿಯ ಮುಂದೆ ರಂಗವಿದೆ. ಈ ರಂಗದಲ್ಲೇ ಒಂದು ಮಾರಿಗುಡಿ ಇದೆ. ಊರಿನ ಜನರಲ್ಲಿ ಒಕ್ಕಲಿಗರೆ ಹೆಚ್ಚು. ಕೆಲವು ಹರಿಜನ ಮತ್ತು ಆಚಾರರ ಕುಟುಂಬಗಳಿವೆ. ಗೊರವಿಯವರಿಗೆ ಹೆತ್ತಗೋನಹಳ್ಳಿ ಮಾಯಮ್ಮನ ಕನ್ನಂಕರಡಿ ತೆಗೆದುಕೊಂಡು ಹೋಗುವ ಹಕ್ಕಿದೆ. ದೇವಾಲಯದ ವಾದ್ಯಕಾರ ಹರಿಜನರೂ ಸಹ ಈ ಊರಿನವರೆ.

ಹೆತ್ತಗೋನಹಳ್ಳಿ, ಮಾಯಮ್ಮ ದೇವಾಲಯದಿಂದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿದೆ. ಇದು ಗೊರವಿ, ಬಿಲ್ಲೇನಹಳ್ಳಿಯಷ್ಟು ದೊಡ್ಡ ಊರಲ್ಲ. ಸುಮಾರು ನೂರುಮನೆಗಳಿರಬಹುದು. ಎತ್ತುಗೌಡನಹಳ್ಳಿಯಿಂದ ಹೆತ್ತಗೋನಹಳ್ಳಿಯಾಗಿದೆ ಎಂದು ಈ ಹಿಂದೆಯೆ ಹೇಳಲಾಗಿದೆ. ಇದು ದೇವತೆ ನೆಲಸಿದ ಊರಾದುದರಿಂದ ದೇವತೆಯ ಪೂಜಾರಿಗಳು ಈ ಊರಿನವರು. ದೇವತೆಯ ಒಡವೆವಸ್ತ್ರಗಳನ್ನು ಇಲ್ಲಿಯೇ ಇಡಲಾಗುತ್ತದೆ. ಈ ಊರು ಇತ್ತೀಚಿನವರೆಗೆ ಎತ್ತುಗಳ ವ್ಯಾಪಾರಕ್ಕೆ ಪ್ರಸಿದ್ಧಿಯಾಗಿದ್ದಿತಂತೆ. ಈ ಕಡೆಯ ಹಳ್ಳಿಕಾರ ಜಾತಿಯ ಎತ್ತುಗಳಿಗೆ ಹಾವೇರಿಸೀಮೆಯಲ್ಲಿ ಬಹಳ ಬೇಡಿಕೆ ಮತ್ತು ಒಳ್ಳೆಯ ಬೆಲೆಯಂತೆ. ಹೀಗೆ ವ್ಯಾಪಾರ ಮಾಡುವ ಮನೆಯವರು ಮುಂದೆ ಹಾವೇರಿಗೌಡ ಎಂತಲೇ ಹೆಸರಾದುದನ್ನು ಹೇಳುತ್ತಾರೆ. ಮಾಯಮ್ಮನ ಹಬ್ಬದ ಕೊನೆಯ ದಿನದ ಓಕುಳಿ ಏರ್ಪಾಡು ಹೆತ್ತಗೋನಹಳ್ಳಿಯವರ ಹಕ್ಕು. ಪೂಜಾರರು, ಗುಡಿಗೌಡರು ಈ ಊರಿನವರು.

ದೊಡ್ಡಹಾರನಹಳ್ಳಿ, ಮಾಯಮ್ಮನ ದೇವಾಲಯದಿಂದ ಪಶ್ಚಿಮಕ್ಕೆ ಗೊರವಿಯಿಂದ ಆಚೆಗೆ ಇರುವ ಊರು. ಈ ಊರು ಒಂದು ಕಾಲದಲ್ಲಿ ಅಗ್ರಹಾರವಾಗಿದ್ದ ಸಾಧ್ಯತೆ ಇದೆ. ಇಬ್ಬರು ಬ್ರಾಹ್ಮಣ ಅಣ್ಣತಮ್ಮಂದಿರು ವಾಸಮಾಡಿದ ಸ್ಥಳ ಎಂದು ದೊಡ್ಡ ಹಾರನಹಳ್ಳಿ, ಚಿಕ್ಕಹಾರನಹಳ್ಳಿ ಎಂದು ಕರೆಯುತ್ತಾರೆ. ಹಾರುವನ ಹಳ್ಳಿ ಹಾರನಹಳ್ಳಿಯಾಗಿರಬೇಕು. ಅರವತ್ತು-ಎಪ್ಪತ್ತು ಮನೆಗಳ ಸಾಧಾರಣ ಊರು. ಈ ಊರಿನವರು ಹಬ್ಬದ ದಿನ ಮೊದಲ ಮಡೆ ಅರ್ಪಿಸುವ ಹಕ್ಕನ್ನು ಹೊಂದಿದ್ದಾರೆ.

ಮಲ್ಲೇನಹಳ್ಳಿ ಮಾಯಮ್ಮ ಕ್ಷೇತ್ರದಿಂದ ಪಶ್ಚಿಮಕ್ಕೆ ಆರೇಳು ಕಿ. ಮೀ. ದೂರದಲ್ಲಿದೆ. ನಲವತ್ತು ಐವತ್ತು ಮನೆಗಳಿರಬಹುದೆಂದು ಹೇಳುತ್ತಾರೆ. ಈ ಊರಿನಲ್ಲಿರುವವರಲ್ಲಿ ಹೆಚ್ಚು ಜನ ಒಕ್ಕಲಿಗರು. ಮಾಯಮ್ಮನ ತೇರಿಗೆ ಬಲಿಕೊಡುವ ಮರಿಯನ್ನು ತರುವ ಹಕ್ಕು ಈ ಊರಿಗಿದೆ.

ಶಾರಹಳ್ಳಿ ಮಾಯಮ್ಮನ ದೇವಾಲಯದಿಂದ ದಕ್ಷಿಣ ಮೂಲೆಗೆ ಐದಾರು ಕಿ. ಮೀ. ದೂರದಲ್ಲಿದೆ. ಇದು ಸಾಕಷ್ಟು ದೊಡ್ಡ ಗ್ರಾಮ. ಈ ಕ್ಷೇತ್ರದ ಪಕ್ಕದಲ್ಲಿ ಹರಿಯುವ

ವಿಷಂಪರಿಹಳ್ಳಿ ಶಾರಹಳ್ಳಿ ಪಕ್ಕದಲ್ಲಿ ಹರಿದು ಹೋಗುತ್ತದೆ. ಈ ಊರಿಗೆ ಶಾರಹಳ್ಳಿ ಎಂದು ಹೆಸರು ಬರಲು ಎರಡು ಕಾರಣ ಹೇಳುತ್ತಾರೆ. ಈ ಊರಹತ್ತಿರ ದೊಡ್ಡಸಂತೆ ನಡೆಯುತ್ತಿತ್ತೆಂದೂ ಆಗಿನ ಕಾಲದಲ್ಲಿ ಇದೊಂದು ಶಹರ್ (ನಗರ) ಆಗಿತ್ತೆಂದೂ ಮುಂದೆ ಅದು ಕಾರಣಾಂತರದಿಂದ ಹಳ್ಳಿಯಾಯಿತೆಂದೂ ಹೇಳುತ್ತಾರೆ. ಈ ಕಾರಣದಿಂದ ಶಹರಹಳ್ಳಿ-ಶಾರಹಳ್ಳಿ ಆಗಿದೆಯಂತೆ. ಇನ್ನೊಂದು ಈ ಊರಪಕ್ಕದ ಹಳ್ಳ ತುಂಬಿ ಹರಿಯುತ್ತಿತ್ತೆಂದೂ ಮರದ ಸಾರುವೆಯ ಮೇಲೆ ದಾಟಿ ಊರಿಗೆ ಹೋಗಬೇಕಾಗಿತ್ತೆಂದೂ ಆದುದರಿಂದ ಸಾರುವೆಯ ಹಳ್ಳಿ -ಸಾರಹಳ್ಳಿ- ಶಾರಹಳ್ಳಿಯಾಗಿದೆಯೆಂದೂ ಹೇಳುತ್ತಾರೆ. ಇದರಲ್ಲಿ ಯಾವುದು ಸರಿ ಎಂದು ಹೇಳಲಾಗುವುದಿಲ್ಲ. ಮಾಯಮ್ಮನ ಜಾತ್ರೆಯದಿನ ಸೂರ್ಯೋದಯಕ್ಕೆ ಹೋರಡುವ ಹೂವಿನ ತೇರು ಕಟ್ಟುವ ಹಕ್ಕು ಈ ಊರಿನವರಿಗೆ ಸೇರಿದೆ. ಈ ಊರಿನಲ್ಲಿ ಕೂಡ, ಒಕ್ಕಲಿಗರೇ ಹೆಚ್ಚು.

ದಾಸನಪುರ ಇನ್ನೊಂದು ಚಿಕ್ಕಹಳ್ಳಿ. ಈ ಕ್ಷೇತ್ರದಿಂದ ಪಶ್ಚಿಮಕ್ಕೆ ಐದಾರು ಕಿ. ಮೀ. ದೂರದಲ್ಲಿರುವ ಈ ಊರಿನವರಿಗೆ ಯಾವ ನಿಯತವಾದ ಕೆಲಸಗಳ ಹಕ್ಕುಗಳು ಕಂಡು ಬರುವುದಿಲ್ಲ. ಈ ಏಳು ಊರುಗಳಲ್ಲದೆ ಇನ್ನೂ ಅನೇಕ ಊರವರು ಈ ದೇವತೆಗೆ ನಡೆದು ಕೊಳ್ಳುತ್ತಾರೆ. ಅಗ್ರಹಾರ ಬಾಚಹಳ್ಳಿಯವರು ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ದೇವಿಯ ಹೊಸವಿಗ್ರಹವನ್ನು ಮಾಡಿಸಿ ಪ್ರತಿಷ್ಠಾಪಿಸುವ ಹಕ್ಕನ್ನು ಹೊಂದಿದ್ದಾರೆ. ಹಾಗೆಯೇ ಭಾರತೀಪುರ, ಸಂತೇಬಾಚಹಳ್ಳಿಗಳಿಂದ ಮೇಲುಕೋಟೆಯಾಚೆಯ ಹಟ್ನಬೇವುಕಲ್ಲು ಗ್ರಾಮಗಳವರೆಗೆ ಈಕೆಯ ಭಕ್ತರಿರುವುದಾಗಿ ಹೇಳುತ್ತಾರೆ. ಆದರೆ ಪ್ರತಿ ವರ್ಷ ನಡೆಯುವ ಹಬ್ಬಕ್ಕೆ ಸಂಬಂಧಿಸಿದಂತೆ ಮೇಲೆ ಹೇಳಿದ ಏಳೂರುಗಳೇ ಪ್ರಧಾನ ಪಾತ್ರವಹಿಸುತ್ತವೆ.

* * * * *

ಪ್ರತಿ ವರ್ಷವು ಹೆತ್ತಗೋನಹಳ್ಳಿ ಮಾಯಮ್ಮನ ಹಬ್ಬ ಏಪ್ರಿಲ್ ಅಥವಾ ಮಾರ್ಚ್ ತಿಂಗಳಿನಲ್ಲಿ ನಡೆಯುತ್ತದೆ. ಹಿಂದೂ ಹೊಸವರ್ಷ, ಅಂದರೆ ಚಂದ್ರಮಾನ ಯುಗಾದಿಯಾದ ಹದಿನೈದು ದಿನಕ್ಕೆ ಬರುವ ಮಂಗಳವಾರ ಈ ಹಬ್ಬ ನಡೆಯಬೇಕೆಂಬುದು ನಿಯಮ. ಹದಿನೈದು ದಿನಕ್ಕೆ ಮಂಗಳವಾರ ಬರದಿದ್ದರೆ, ಮುಂದಿನ ಮಂಗಳವಾರ ಹಬ್ಬ ಮಾಡುತ್ತಾರೆ. ಯುಗಾದಿಯದಿನ ಏಳೂರ ಪ್ರಮುಖರೂ ದೇವಾಯದಲ್ಲಿ ಸಭೆ ಸೇರುತ್ತಾರೆ. ಯಾವ ದಿನ ಹಬ್ಬ ಬೀಳುತ್ತದೆಂಬುದು ಅಂದು ತೀರ್ಮಾನವಾಗುತ್ತದೆ. ಈ ತೀರ್ಮಾನದ ನಂತರ ಮಾಯಮ್ಮನಿಗೆ ಪಟ್ಟ ಕಟ್ಟುತ್ತಾರೆ. ಆ ನಂತರ ರಥದ ಗಾಲಿಗಳನ್ನು ಈಚೆಗೆ ಹಾಕುತ್ತಾರೆ. ಪಟ್ಟಕ್ಕೆ ಕೂರುವುದು ಅಥವಾ ಪಟ್ಟ ಕಟ್ಟುವುದು ಎಂದರೆ ಅಂದಿನಿಂದ ಹಬ್ಬ ಮುಗಿಯುವವರೆಗೆ ವ್ರತಾಚರಣೆ ಎಂದು ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಇಲ್ಲಿ ಹೆಚ್ಚು ವಿವರಗಳು ಯಾರಿಗೂ ತಿಳಿಯದು. ಆದರೆ ಬೇರೆ ಬೇರೆಯ ದೇವಾಲಯಗಳು ಮಠಮಾನ್ಯಗಳ ದೃಷ್ಟಿಯಿಂದ ಹೇಳಬಹುದಾದರೆ ಇದೊಂದು ವಾರ್ಷಿಕ ಆಚರಣೆ ಎಂದು ಹೇಳಬಹುದಾಗಿದೆ.

ದೇವಾಲಯದಲ್ಲಿ ಮುಖ್ಯಸ್ಥರು ತೀರ್ಮಾನ ತೆಗೆದುಕೊಂಡ ದಿನ ಏಳೂರಿನವರೂ ಕಂಬ ತರುತ್ತಾರೆ. ಇದು ವೈದಿಕಾಚರಣೆಯ ಸ್ತಂಭಮುಹೂರ್ತ ಇದ್ದಂತೆ ಎಂದು ಹೇಳಬಹುದು. ಕಂಬ ತರುವುದು ಎಂದರೆ ಗೊನೆ ಬಿಟ್ಟ ಬಾಳೆ ಕಂಬವೊಂದನ್ನು ಕಡಿದು ತಂದು ರಂಗದ ಮೈದಾನದ ಮಧ್ಯದಲ್ಲಿರುವ ಕಲ್ಲಿಗೆ ಕಟ್ಟಿ ಪೂಜೆ ಸಲ್ಲಿಸುತ್ತಾರೆ. ಆ ದಿನ ಸಂಜೆಯೇ ಕರಕು ಹಾಕಿ ರಂಗವನ್ನು ಆರಂಭಿಸುತ್ತಾರೆ. ಊರಿನ ಪ್ರತಿಮನೆಯಿಂದಲೂ ಒಬ್ಬ ಗಂಡಾಳು ಬಂದು ಈ ರಂಗದಲ್ಲಿ ಪಾಲುಗೊಳ್ಳಬೇಕು. ಕರಕು ಹಾಕುವುದು ಎಂದರೆ ಬೆಂಕಿ ಹತ್ತಿಸುವುದು. ಹಬ್ಬ ನಿರ್ಧಾರವಾದ ಮೇಲೆ ಊರಿನ ಹರಿಜನ ಹಕ್ಕುದಾರರು. ರಂಗಕ್ಕೆ ಬೇಕಾಗುವ ತರಗು, ಸೋಗೆಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ. ರಂಗ ಕುಣಿಯುವವರು ಗೆಜ್ಜೆಗಳನ್ನು ಹುಡುಕಿಕೊಳ್ಳುತ್ತಾರೆ. ಏಳರಿಂದ ಎಂಟು ಗಂಟೆಯೊಳಗೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ರಾತ್ರಿಯೂಟ ಮುಗಿದಿರುತ್ತದೆ. ಅಷ್ಟು ಹೊತ್ತಿಗೆ ಕುಳವಾಡಿಗಳು ರಂಗದಲ್ಲಿ ತಮಟೆಯ ಸದ್ದು ಮಾಡುತ್ತಾರೆ. ಇದೇ ಊರಿನ ಜನರಿಗೆ ರಂಗಕ್ಕೆ ಬರುವಂತೆ ನೀಡುವ ಕರೆ.

ಗ್ರಾಮದ ಜನರು ಒಬ್ಬೊಬ್ಬರಾಗಿ ರಂಗದ ಮೈದಾನದಲ್ಲಿ ಸೇರುತ್ತಾರೆ. ಹೆಂಗಸರು, ಮಕ್ಕಳು, ಮುದುಕರು ರಂಗ ಮೈದಾನದಲ್ಲಿ ಸೇರುತ್ತಾರೆ. ಕಾಲಿಗೆ ಗೆಜ್ಜೆಕಟ್ಟಿ ಕೈಯಲ್ಲಿ ವಸ್ತ್ರವೊಂದನ್ನು ಹಿಡಿದು ತಮಟೆಯ ಗತ್ತಿಗೆ ಕುಣಿಯುವ, ಗಂಡಸರಲ್ಲಿ ಹದಿನೈದರಿಂದ ಐವತ್ತು ಅವರವತ್ತು ಜನದವರೆಗೂ ಇರುತ್ತಾರೆ. ತಮಟೆಯವರ ಎದುರಿಗೆ ಸಾಲಾಗಿ ನಿಂತು ಕುಣಿಯುವ ಇದನ್ನು ರಂಗದ ಕುಣಿತ, ಸುಗ್ಗಿಯ ಕುಣಿತ ಮಾರೀ ಕುಣಿತ ಮುಂತಾದ ಹೆಸರುಗಳಿಂದ ಗುರುತಿಸಲಾಗಿದೆ. ಈಗ ಇದೊಂದು ಜನಪದ ಕಲೆಯಾಗಿಯೂ ಪ್ರಸಿದ್ಧವಾಗಿದೆ. ಯುಗಾದಿಯ ದಿನದಿಂದ ಹಬ್ಬ ಮುಗಿಯುವವರೆಗೆ ಪ್ರತಿ ರಾತ್ರಿಯೂ ರಂಗ

ಕುಣಿಯುತ್ತಾರೆ. ರಂಗದ ಕುಣಿತದವರು ದಣಿವಾದಾಗ ಕೋಲು ಹುಯ್ಯುವವರು ರಂಗ ಪ್ರವೇಶಿಸುತ್ತಾರೆ. ಮಧ್ಯೆ ಮಧ್ಯೆ ವಿವಿಧ ರೀತಿಯ ಹಾಸ್ಯ ವೇಷಗಳ ಪ್ರಸಂಗಗಳು ಬರುತ್ತವೆ. ಮೊದಲ ದಿನ ಒಂದೊ ಎರಡೊ ಗಂಟೆ ಕಾಲ ನಡೆಯುವ ಇದು ಕೊನೆಯ ದಿನ ಅಂದರೆ ಹಬ್ಬದ ರಾತ್ರಿ ಇಡೀ ರಾತ್ರಿ ನಡೆಯುತ್ತದೆ.

ಹಬ್ಬ ಹತ್ತಿರವಾದಂತೆಲ್ಲ ನೆಂಟರಿಷ್ಟರಿಗೆ ಕರೆ ಹೋಗುತ್ತದೆ. ಈ ದೇವತೆಯ ಭಕ್ತರು ಏಳುಹಳ್ಳಿಗಳಿಂದ ಬೇರೆ ಬೇರೆ ಊರುಗಳಿಗೆ ಮದುವೆಯಾಗಿ ಹೋಗಿರುವ ಹೆಣ್ಣುಮಕ್ಕಳು ಬಂದು ಈ ಹಬ್ಬದಲ್ಲಿ ಮಾಯಮ್ಮನಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಆಯಾ ಊರಿನ ಹಕ್ಕಿನಂತೆ ದೇವಾಲಯದ ಕೆಲಸ, ಹಬ್ಬದ ಏರ್ಪಾಡುಗಳನ್ನು ಏಳೂರಿನಲ್ಲಿಯೂ ಸರಿಸಮವಾಗಿಯೇ ನಡೆಯುತ್ತದೆ. ಇಲ್ಲಿ ಯಾರು ಮುಖ್ಯ ಯಾರು ಅಮುಖ್ಯ ಎಂದಿಲ್ಲ. ಯಾವುದೇ ಕಾರಣಕ್ಕೂ ಹಬ್ಬ ನಿಲ್ಲುವುದಿಲ್ಲ. ಯುಗಾದಿಯದಿನ ಗಾಲಿಯನ್ನು ಹೊರಗೆ ಹಾಕಿದ ಮೇಲೆಯಾಗಲಿ, ಹಬ್ಬ ಹತ್ತಿರ ಬಂದಾಗಲಾಗಲೀ ಯಾವುದೇ ಊರಿನಲ್ಲಿ ಸಾಮೂಹಿಕ ಸೂತಕ, ಸಾವು ಇತ್ಯಾದಿ ಉಂಟಾದರೆ ಆ ಊರವರು ಹಬ್ಬದಲ್ಲಿ ಪಾಲ್ಗೊಳ್ಳುವುದಿಲ್ಲ. ಅದು ಒಂದು ಮನೆಗೆ ಸಂಬಂಧಿಸಿದ್ದರೆ ಆ ಮನೆಯವರು ಹಬ್ಬ ಮಾಡುವುದಿಲ್ಲ.

ಹಬ್ಬದ ದಿನ ಸಂಜೆಯ ಹೊತ್ತಿಗೆ ನೆಂಟರಿಷ್ಟರೆಲ್ಲ ಮನೆ ತುಂಬಾ ಸೇರಿರುತ್ತಾರೆ. ರಥದ ಗಾಲಿಯನ್ನು ಹೊರಹಾಕಿದ ದಿನದಿಂದ ಯಾರೂ ಮನೆಯಲ್ಲಿ ಮಾಂಸಾಹಾರವನ್ನು ಮಾಡುವಂತಿಲ್ಲ. ಹಬ್ಬದ ದಿನದ ವಿಶೇಷ ಅಡುಗೆ ಎಂದರೆ ಶಾವಿಗೆ ಮತ್ತು ಕಾಯಿಹಾಲು. ರಾಗಿ, ಅಕ್ಕಿಯ ಹಿಟ್ಟಿನಿಂದ ಇದನ್ನು ಮಾಡುತ್ತಾರೆ. ಬಿಸಿ ಬಿಸಿಯಾದ ಬೇಯಿಸಿದ ರಾಗಿ ಹಿಟ್ಟು (ಮುದ್ದೆ) ಅಥವಾ ಅಕ್ಕಿಹಿಟ್ಟನ್ನು ಸಣ್ಣ ಸಣ್ಣ ಮುದ್ದೆ ಮಾಡಿ ಶಾವಿಗೆ ಒರಳಿಗೆ ಹಾಕಿ ಒತ್ತಿದರೆ ದಾರದ ಹಾಗೆ ಶಾವಿಗೆ ಶೇಖರವಾಗುತ್ತದೆ. ಇದನ್ನು ಕಾಯಿಹಾಲಿನಲ್ಲಿ ಕಲಸಿ ತಿನ್ನುತ್ತಾರೆ. ಬೆಳಗಿನಿಂದಲೇ ಮನೆಯನ್ನು ಸಾರಿಸಿ ಅಡುಗೆಯ ಸಿದ್ಧತೆ ನಡೆಯುತ್ತದೆ.

ಹಬ್ಬದ ದಿನವಾದ ಮಂಗಳವಾರ ರಾತ್ರಿ ಏಳೂರುಗಳಿಂದಲೂ ದೇವಾಲಯಕ್ಕೆ ಮಡೆ ಬರಬೇಕು.ಹಾಗೆಯೇ ಕಳಸ, ಕನ್ನಡಿ, ಒಡವೆವಸ್ತ್ರ ಹೀಗೆ ದೇವಿಗೆ ಸೇರಿದ ಎಲ್ಲಾ ವಸ್ತುಗಳನ್ನೂ ಸಂಬಂಧಿಸಿದ ಹಕ್ಕುದಾರರು ಸಂಪ್ರದಾಯ ಬದ್ಧವಾಗಿ ಮಡೆಯೊಂದಿಗೆ ತರುತ್ತಾರೆ. ಉದಾಹರಣೆಗೆ, ಕಳಸ ಬಿಲ್ಲೇನಹಳ್ಳಿಯಿಂದ, ಕನ್ನಂಕರಡಿ ಗೊರವಿಯಿಂದ ಹೀಗೆ. ರಾತ್ರಿ ಸುಮಾರು ಆರೂವರೆಯಿಂದ ಏಳುಗಂಟೆಯ ಸಮಯಕ್ಕೆ ಆಯಾ ಊರಿನಿಂದ ಮಡೆ ಹೊರಡುತ್ತದೆ. ಮಡೆ ಎಂದರೆ ಹೊಸ ಮಡಕೆಯಲ್ಲಿ ಮಾಡಿದ ಹುಗ್ಗಿಯ ಅನ್ನ. ಇದನ್ನು ಉಗ್ಗೇದನ್ನ ಎಂದೂ ಕರೆಯುತ್ತಾರೆ. ಇದು ಪೊಂಗಲು ರೀತಿಯ ಅನ್ನ. ಹೊಸದಾಗಿ ತಂದ ಮಡಕೆಯಲ್ಲಿ ಅನ್ನವನ್ನು ಬಸಿಯದೆ ಇಂಗುವಂತೆ ಬೇಯಿಸಿ ಅದಕ್ಕೆ ಅರಿಶಿನ, ಮೆಣಸು, ತುಪ್ಪ ಸೇರಿಸುತ್ತಾರೆ. ನಂತರ ಅದನ್ನು ಅಲಂಕರಿಸಿ, ಮಡಕೆಯ ಮೇಲಿನ ಮುಚ್ಚಳಕ್ಕೆ ಮಾವಿನ ಎಲೆಯನ್ನು ಇಟ್ಟು ಅದರ ಮೇಲೆ ಒಂದು ಹಣತೆಯನ್ನು ಇಡುತ್ತಾರೆ. ನಂತರ ಮನೆಯಲ್ಲಿ ಒಂದು ಕಳಸವನ್ನು ಇಟ್ಟು, ಅದರೊಂದಿಗೆ ಈ ಮಡೆಯನ್ನೂ ಇಟ್ಟು

ಮನೆಯವರೆಲ್ಲಾ ಪೂಜೆಮಾಡುತ್ತಾರೆ. ನಂತರ ಮನೆಯ ಹೆಣ್ಣುಮಕ್ಕಳು ಇದನ್ನು ಹೊತ್ತುಕೊಂಡು ಹೋಗುತ್ತಾರೆ. ಮಡೆಯನ್ನು ಗಂಡಸರು ಹೊರುವುದಿಲ್ಲ.

ನಿಗಧಿಯಾದ ಕಾಲಕ್ಕೆ ಕುಳವಾಡಿ "ಮಡೆತಕ್ಕೊಂಡು ಬನ್ರವ್ವೋ" ಎಂದು ತಮಟೆ ಬಡಿಯುತ್ತಾ ಊರಿನಲ್ಲೆಲ್ಲಾ ಒಂದು ಸುತ್ತು ಸಾರಿಕೊಂಡು ಬರುತ್ತಾನೆ. ಕೂಡಲೆ ಮನೆ ಮನೆಯಿಂದ ಮಡೆ ಹೊತ್ತ ಮಹಿಳೆಯರು ಹೊರಡುತ್ತಾರೆ. ಎಲ್ಲರೂ ಮೊದಲು ರಂಗದ ಮೈದಾನದಲ್ಲಿ ಸೇರುತ್ತಾರೆ. ಇವರನ್ನು ನೆಂಟರಿಷ್ಟರೂ ಕೂಡಿಕೊಳ್ಳುತ್ತಾರೆ. ಆಯಾ ಊರಿನಿಂದ ಹೋಗಬೇಕಾದ ವಸ್ತುಗಳನ್ನು ಅಲ್ಲಿಗೆ ತಂದು ಇಡುತ್ತಾರೆ. ಉದಾಹರಣೆಗೆ ಗೊರವಿ ಗ್ರಾಮದಿಂದ ಕನ್ನಂಕರಡಿ ಹೊರಡುತ್ತದೆ. ಇದನ್ನು ಋತುಮತಿಯಾಗದ ಹೆಣ್ಣುಮಕ್ಕಳೇ (ಕನ್ನೆಯರೇ) ಹೊರಬೇಕು. ಅಂತಹವರು ಆ ದಿನ ಉಪವಾಸವಿದ್ದು ಸ್ನಾನಮಾಡಿ ಮಡಿ ವಸ್ತ್ರ ಧರಿಸುತ್ತಾರೆ. ಆಕೆಗೆ ಅಗಸರು ನಡೆಮಡಿ ಹಾಸುತ್ತಾರೆ. ಊರಿನ ಎಲ್ಲರ ಮನೆಯ ಮಡೆಯೂ ಸೇರಿದೆ ಎಂದು ಖಚಿತವಾದ ಮೇಲೆ ಹಿರಿಯರು ಹೊರಡಲು ಅನುಮತಿ ಕೊಡುತ್ತಾರೆ. ಮುಂದೆ ಕನ್ನಂಕರಡಿ ಹೊತ್ತ ಹುಡುಗಿ (ಬೇರೆ ಬೇರೆ ಊರುಗಳಲ್ಲಿ ಇದು ಬದಲಾಗುತ್ತದೆ) ಹಿಂದೆ ಮಡೆ ಹೊತ್ತ ಹೆಂಗಸರು ನಡೆಮಡಿಯ ಮೇಲೆ ನಡೆಯುತ್ತಾರೆ. ಇವರೊಂದಿಗೆ ನೆಂಟರಿಷ್ಟರು. ಊರಿನ ಗಂಡಸರು ದೇವಾಲಯದತ್ತ ಹೆಜ್ಜೆ ಹಾಕುತ್ತಾರೆ. ಎಲ್ಲರಿಗಿಂತ ಮುಂದೆ ತಮಟೆಯವರಿರುತ್ತಾರೆ.

ಏಳೂರಿನಿಂದ ಹೊರಟ ಮಡೆಗಳೆಲ್ಲವೂ ಬಂದು ದೇವಾಲಯದ ಪ್ರಾಕಾರದ ಮಹಾದ್ವಾರದ ಮುಂದಿನ ಕೊಂಡ ಹಾಯ್ದುಕೊಂಡೇ ಒಳಗೆ ಪ್ರವೇಶಿಸಬೇಕು. ಕೊಂಡ ಕೆಂಪಾಗಿ ಕಾದ ಕೆಂಡದಿಂದ ತುಂಬಿರುತ್ತದೆ. ಮಡೆ ಹೊತ್ತವರು ಮತ್ತು ಹರಕೆ ಹೊತ್ತವರು ಇದರ ಮೇಲೆ ನಡೆದು ದೇವಾಲಯವನ್ನು ಪ್ರವೇಶಿಸಬೇಕು. ಇದು ದೇವಾಲಯವನ್ನು ಪ್ರವೇಶಿಸುವವರ ಪರಿಶುದ್ಧತೆಯನ್ನು ಪರೀಕ್ಷಿಸುವುದು. ಕೆಲವರು ಕೊಂಡ ಹಾಯುವುದಾಗಿಯೇ ಹರಕೆ ಮಾಡಿಕೊಂಡಿರುತ್ತಾರೆ. ಈ ಪದ್ಧತಿಯನ್ನು ಕರ್ನಾಟಕದ ಅನೇಕ ಗ್ರಾಮದೇವತೆಗಳ ಹಬ್ಬದಲ್ಲಿ ಕಾಣಬಹುದು.

ಕೊಂಡ ಹಾಯ್ದು ಒಳಗೆ ಬಂದ ಮಡೆ ಹೊತ್ತ ಹೆಂಗಸರೆಲ್ಲಾ ಆಯಾ ಊರಿಗೆ ನಿಗಧಿಯಾದ ಸ್ಥಳಗಳಲ್ಲಿ ಸಾಲಾಗಿ ಕೂರುತ್ತಾರೆ. ಹರಕೆ ಹೊತ್ತವರು ತಮ್ಮ ತಮ್ಮ ಮಡೆಯೊಂದಿಗೆ ಕೂರುತ್ತಾರೆ. ಮೊದಲು ವಿವಿಧ ಊರುಗಳಿಂದ ಬಂದ ದೇವಿಯ ಲಾಂಛನಗಳು ಒಡವೆ ವಸ್ತ್ರಗಳು ಒಳ ಹೋಗಿ ದೇವಿಯನ್ನು ಸೇರುತ್ತವೆ. ನಂತರ ಮಡೆ ಅರ್ಪಿಸುವ ಕೆಲಸ ಪ್ರಾರಂಭವಾಗುತ್ತದೆ. ಪ್ರತಿಯೊಬ್ಬರ ಮಡೆಯಿಂದಲೂ ಸ್ವಲ್ಪ ಹುಗ್ಗಿ ಅನ್ನವನ್ನು ಬಗೆದು ದೇವಿಯ ಮುಂದಿನ ಎಡೆಗೆ ಹಾಕುತ್ತಾರೆ. ನಂತರ ಹರಕೆ ಹೊತ್ತವರು ತಮ್ಮ ಹರಕೆಯನ್ನು ಅರ್ಪಿಸುತ್ತಾರೆ. ಕೊನೆಯಲ್ಲಿ ಪೂಜೆ ಮಾಡುತ್ತಾರೆ. ಅಲ್ಲಿಗೆ ಮಡೆಯ ಕೆಲಸ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಊರಿಗೆ ಹೊರಡುತ್ತಾರೆ. ಹಿಂತಿರುಗುವಾಗ ವಾದ್ಯ, ಮೆರವಣಿಗೆ ಇರುವುದಿಲ್ಲ. ಗುಂಪುಗುಂಪಾಗಿ ತಮ್ಮ ತಮ್ಮ ಊರಿಗೆ ಹೆಜ್ಜೆಹಾಕುವ ಅವರನ್ನು ಹಸಿವು ಬೇಗ ಬೇಗ ಊರಿನ ಕಡೆ ಎಳೆಯುತ್ತದೆ ಎಂದು ಹೇಳಬಹುದು.

ಮಡೆ ಅರ್ಪಿಸಿ ನಂತರ ತಮ್ಮ ತಮ್ಮ ಮನೆಯಲ್ಲಿ ಶಾವಿಗೆಯ ಊಟದಲ್ಲಿ ತಲ್ಲೀನರಾಗುತ್ತಾರೆ. ಇಡೀ ದಿನ ಉಪವಾಸವಿರುವುದರಿಂದ ಇದು ನಿಧಾನವಾಗಿಯೇ ಸಾಗುತ್ತದೆ. ಊಟೋಪಚಾರಗಳು ಮುಗಿಯುವ ಹೊತ್ತಿಗೆ ರಾತ್ರಿ ಬಹಳ ಹೊತ್ತೇ ಆಗಿರುತ್ತದೆ. ಅಷ್ಟರಲ್ಲಿ ರಂಗದಿಂದ ತಮಟೆಯ ಸದ್ದು ನುಗ್ಗಿ ಬಂದು ಊಟದ ಭಾರದಲ್ಲಿ ತೂಕಡಿಸುತ್ತಿದ್ದವರಿಗೆಲ್ಲ ಈ ಹೊತ್ತು ಜಾಗರಣೆ ಎಂದು ಎಚ್ಚರಿಸುತ್ತದೆ. ಮಕ್ಕಳಂತೂ ಕುಣಿಯುತ್ತಾ ನೆಗೆಯುತ್ತಾ ರಂಗದತ್ತ ಓಡುತ್ತಾರೆ. ಬಂದ ನೆಂಟರಿಷ್ಟರೊಂದಿಗೆ ಮನೆಯವರು ಚಾಪೆ, ಮಂದಲಿಗೆ ಸಹಿತ ರಂಗದಲ್ಲಿ ಬಂದು ಸೇರುತ್ತಾರೆ.

ಯುಗಾದಿಯಂದು ರಾತ್ರಿ ಆರಂಭವಾದ ರಂಗದ ಕುಣಿತ ಕ್ರಮೇಣವಾಗಿ ಏರುತ್ತಾ ಹೋಗಿ ಈ ದಿನ ಕೊನೆಗೊಳ್ಳುತ್ತದೆ. ಜಾಗರಣೆ ಎಂದರೆ ರಾತ್ರಿಯೆಲ್ಲಾ ನಡೆಯುತ್ತದೆ ಎಂದರ್ಥ. ಈ ದಿನ ಊರೂರಿಂದ ಬಂದ ನೆಂಟರಿಷ್ಟರ ಮುಂದೆ ತಮ್ಮ ಕಲಾಪ್ರತಿಭೆಯನ್ನು ತೋರಿಸುವ ಆಸೆಯಿಂದ, ರಂಗದ ಕುಣಿತ, ಕೊರವಂಜಿ ವೇಷ, ಕೋಲಾಟ, ಹೆಣ್ಣುಮಕ್ಕಳಿಂದ ಜನಪದ ಹಾಡುಗಳು, ಹಾಸ್ಯ, ಕುಚೋದ್ಯ ಹೀಗೆ ನಾನಾ ರೀತಿಯ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಈ ಮಧ್ಯೆ ಏಳೂರುಗಳಲ್ಲಿ ಬೇರೆ ಬೇರೆ ಊರಿನವರು ಬಂದು ತಮ್ಮ ಕಲೆ ಪ್ರದರ್ಶಿಸುವುದುಂಟು. ಜನರು ತೂಕಡಿಸುತ್ತಿದ್ದರೆ, ಅಲ್ಲೇ ಒಂದು ಕುಚೋದ್ಯದ ಪಾತ್ರ ಹಾಕಿ ರಂಗಕ್ಕಿಳಿದು ನಿದ್ರೆಯನ್ನು ಓಡಿಸುತ್ತಾರೆ. ಈ ಎಲ್ಲವೂ ಮುಗಿದು ರಂಗದ ಕುಣಿತದವರು ತಮ್ಮ ಕೊನೆಯ ಹೆಜ್ಜೆ ಹಾಕುವ ಹೊತ್ತಿಗೆ ಪೂರ್ವ ದಿಕ್ಕಿನ ದೂರದ ಅಂಚಿನಲ್ಲಿ ಕೆಂಪನೆಯ ಗೆರೆಗಳು ಕಾಣಲಾರಂಭಿಸುತ್ತವೆ.

* * * * *

## ಜಾತ್ರೆ - ತೇರು

ಮಂಗಳವಾರ ರಾತ್ರಿಯೆಲ್ಲಾ ರಂಗದಲ್ಲಿ ಕಳೆಯುವ ಏಳೂರಿನ ಜನ ಮತ್ತು ಅಪರ ನೆಂಟರಿಷ್ಟರು ಬುಧವಾರ ನಾಲ್ಕೈವರೆ ಐದು ಗಂಟೆಯ ಹೊತ್ತಿಗೆ ಹೂವಿನ ತೇರಿಗೆ ಹೊರಡುತ್ತಾರೆ. ಹತ್ತು ಹನ್ನೆರಡು ಅಡಿ ಎತ್ತರದ ಮಂಟಪವೊಂದನ್ನು ಬಿದಿರಿನಿಂದ ಕಟ್ಟಿ ಬಣ್ಣ ಬಣ್ಣದ ಬಟ್ಟೆ ಮತ್ತು ಹೂವಿನಿಂದ ಅಲಂಕರಿಸಿರುತ್ತಾರೆ. ಈ ಬಟ್ಟೆಗಳು ದೇವರಿಗೆ ಹರಕೆ ಒಪ್ಪಿಸಿದಂಥವು. ಇದನ್ನು ತೇರಿನ ದಿಬ್ಬದ ಮೇಲೆ ಕಟ್ಟಿರುತ್ತಾರೆ. ಅಲ್ಲಿಗೆ ದೇವರನ್ನು ತಂದು ಅದರಲ್ಲಿ ಕೂರಿಸುತ್ತಾರೆ. ಇಷ್ಟುಹೊತ್ತಿಗೆ ಏಳೂರುಗಳಿಂದಲೂ ಜನ ತಂಡೋಪತಂಡವಾಗಿ ಬಂದು ಸೇರುತ್ತಾರೆ. ಹೂವಿನ ಚಪ್ಪರ ಎತ್ತಿದ ಕೂಡಲೆ ಸೂರ್ಯಕಿರಣಗಳು ಅದರ ಮೇಲೆ ಬೀಳಬೇಕು ಎಂಬುದು ನಂಬಿಕೆ. ಈ ಚಪ್ಪರ ಒಂದು ಸಣ್ಣ ತೇರಿನಂತಿರುತ್ತದೆ. ಇದನ್ನು ಎಳೆಯುವುದಿಲ್ಲ ಹೊರುತ್ತಾರೆ. ಜನರೆ, ದೇವರ ಸಹಿತ, ವಾದ್ಯದೊಂದಿಗೆ ಗುಡಿಯ ಸುತ್ತಾ ಒಂದು ಪ್ರದಕ್ಷಿಣೆ ಹಾಕಿ ಅದೇ ಸ್ಥಳದಲ್ಲಿ ತಂದಿರಿಸುತ್ತಾರೆ. ಜನರು ಹಣ್ಣು ದವನಗಳನ್ನು ಎಸೆದು ಹೋ! ಎಂದು ಕೂಗುತ್ತಾ ತಮ್ಮ ಭಕ್ತಿ ಮತ್ತು ಹರ್ಷವನ್ನು ವ್ಯಕ್ತಪಡಿಸುತ್ತಾರೆ. ಅನಂತರ ಇದನ್ನು ಗುಡಿಯ ಮುಂಭಾಗದ ಜಗುಲಿಯ ಮೇಲೆ ಇಡುತ್ತಾರೆ. ಇದೇ ಹೂವಿನ ಚಪ್ಪರ.

ರಾತ್ರಿಯೆಲ್ಲಾ ನಿದ್ರೆಗೆಟ್ಟು ರಂಗ ನೋಡಿದ ಜನ ಹೂವಿನ ಚಪ್ಪರ ಮುಗಿದೊಡನೆಯೇ ತಮ್ಮ ತಮ್ಮ ಊರುಗಳಿಗೆ ನಡೆಯುತ್ತಾರೆ. ಬೆಳಗಿನ ಉಪಾಹಾರ ಮುಗಿಸಿ ಮಲಗಿದವರನೇಕರು ಏಳುವುದು ತೇರಿಗೆ ಹೋಗುವಾಗಲೇ. ಈ ದಿನವೇ ಮಧ್ಯಾಹ್ನ ತೇರು. ಆದುದರಿಂದ ಮಧ್ಯಾಹ್ನ ಮತ್ತೆ ವಿಶೇಷ ಅಡುಗೆ. ಮನೆ ಸಾರಿಸಿ ಗುಡಿಸಿ ಮಡಿಮಾಡಿಯೇ ಅಡುಗೆ ಮಾಡಬೇಕು. ಶಾವಿಗೆ-ಕಾಯಾಲು ಮತ್ತೆ ಮುಂದುವರಿಯುತ್ತದೆ. ಹೋಳಿಗೆ ಮಾಡುವವರೂ ಉಂಟು. ತೇರೊಪ್ಪತ್ತಿನ ಊಟ ಸ್ವಲ್ಪ ತಡವೆ. ಎರಡು ಗಂಟೆಯ ಹೊತ್ತಿಗೆ ಊಟ ಮುಗಿಸಿ ತೇರಿಗಾಗಿ ಮತ್ತೆ ಎಲ್ಲರೂ ದೇವಾಲಯದತ್ತ ಹೊರಡುತ್ತಾರೆ. ಜನರು ಬಂದು ಸೇರುವಲ್ಲಿ ತೇರು ಅಲಂಕೃತವಾಗಿ ನಿಂತಿರುತ್ತದೆ. ಅಂದು ಬೆಳಗ್ಗೆ ಹೂವಿನ ತೇರಿನಿಂದ ಇಳಿದ ದೇವರು ನಿಗದಿಯಾದ ಯಾವುದೋ ಊರಿಗೆ ಹೋಗಿದ್ದು ಹಿಂತಿರುಗುತ್ತದೆ. ಹಿಂತಿರುಗಿದ ದೇವರನ್ನು ದೇವಾಲಯದಲ್ಲಿರಿಸುತ್ತಾರೆ.

ಸಂಜೆಯ ಇಳಿಹೊತ್ತಿಗೆ ದೇವರು ಮತ್ತೆ ಗುಡಿಯಿಂದ ವಾದ್ಯಸಮೇತ ಹೊರಡುತ್ತದೆ. ಕೋಲಾಟದವರು, ಹಾಡುಗಳನ್ನು ಹಾಡುವ ಹೆಂಗಸರು ಮಾಯಮ್ಮನನ್ನು ಕುರಿತ ಹಾಡುಗಳನ್ನು ಹಾಡುತ್ತಿರುತ್ತಾರೆ. ಗುಡಿಯ ಪ್ರದಕ್ಷಿಣೆ ಹಾಕಿ ಮುಖ್ಯ ದ್ವಾರದಿಂದ ಹೊರಬಂದ ದೇವತೆಯನ್ನು ಪಶ್ಚಿಮಾಭಿಮುಖವಾಗಿ ನಿಂತ ತೇರಿನ ಮೇಲೆ ಕೂರಿಸುತ್ತಾರೆ. ಅಗಲವೂ ಎತ್ತರವೂ ಆದ ನಾಲ್ಕು ಮರದಗಾಲಿ ಮತ್ತು ತೊಲೆಗಳ ಮೇಲೆ ಆರೇಳು ಹಂತದಲ್ಲಿ ತೇರನ್ನು ಕಟ್ಟಿರುತ್ತಾರೆ. ಇದರ ಒಟ್ಟು ಉದ್ದ ನಲವತ್ತು ಐವತ್ತು ಅಡಿ ಇದ್ದಿರಬಹುದು. ಹಿಂದೆ ಬಹಳ ದೊಡ್ಡ ತೇರಿತ್ತೆಂದೂ ಅದು ಹಳೆಯದಾಗಿ ಹೋದಮೇಲೆ

ಈ ತೇರು ಮಾಡಿಸಲಾಯಿತೆಂದೂ ಹೇಳುತ್ತಾರೆ. ಈ ದೇವತೆಗೆ ತೇರುಮಾಡಿಸಿ ಕೊಡುವವರು ಸಾಲಿಗ್ರಾಮದವರಂತೆ. ಇದು ಅವರ ಹಕ್ಕು.

ದೇವರು ತೇರೇರಿ ಕುಳಿತ ಮೇಲೆ ಪೂಜೆ ಮಾಡುತ್ತಾರೆ. ತೇರಿನ ಎರಡು ಬದಿಗೂ ದಪ್ಪ ಹಗ್ಗಗಳನ್ನು ಕಟ್ಟಿ ಉದ್ದಕ್ಕೆ ಬಿಟ್ಟಿರುತ್ತಾರೆ. ನೂರಾರು ಜನರು ಏಕಕಾಲದಲ್ಲಿ ಹಿಡಿಯಲು ಅವಕಾಶವಿರುವಷ್ಟು ಉದ್ದವಾಗಿರುತ್ತದೆ. ಮೊದಲಿಗೆ ತೇರಿಗೆ ಬಲಿ ಕೊಡುತ್ತಾರೆ ಆಡು ಕುರಿ ಇವುಗಳಲ್ಲಿ ಯಾವುದಾದರೊಂದು ಪ್ರಾಣಿಯನ್ನು ರಥದ ಮುಂದೆ ನಿಲ್ಲಿಸಿ ರಥವನ್ನು ಪೂಜಿಸಿ ಈ ಪ್ರಾಣಿಗೆ ತೀರ್ಥ ಹಾಕುತ್ತಾರೆ. ಆ ನಂತರ ದೊಡ್ಡದೊಂದು ಕಂದಲಿನಿಂದ ಅದರ ತಲೆಕಡಿದು ಬಲಿ ಕೊಡುತ್ತಾರೆ. ಈ ಬಲಿ ದೇವತೆಗಲ್ಲ, ಆಕೆಯ ಬಂಟರಿಗೆ. ಈ ಬಲಿಯಲ್ಲಿ ತಲೆಯ ಭಾಗ ತಮಟೆ ಬಡಿಯುವ ಹರಿಜನರಿಗೂ ಮತ್ತು ಉಳಿದ ಭಾಗ ತೇರನ್ನು ಶುದ್ಧಮಾಡಿದ ಆಚಾರರಿಗೂ ಸಲ್ಲುತ್ತದೆ. ಬಲಿಯ ನಂತರ ತೇರು ಹೊರಡಲು ಅಪ್ಪಣೆ ದೊರೆಯುತ್ತದೆ. ಕೂಡಲೇ ಜನರು ಹರ್ಷೋದ್ಗಾರಗಳೊಂದಿಗೆ ತೇರು ಎಳೆಯಲಾರಂಭಿಸುತ್ತಾರೆ. ಹಣ್ಣುದವನಗಳನ್ನು ಜನರು ತೇರಿನ ಮೇಲೆ ಎಸೆದು ತಮ್ಮ ಭಕ್ತಿಯನ್ನು ಸೂಚಿಸುತ್ತಾರೆ. ತೇರಿನ ಮೇಲೆ ಹಣ್ಣುದವನಗಳ ಸುರಿಮಳೆಯಾಗುತ್ತದೆ.

ತೇರಿನ ಸಾರಥಿ ಆಚಾರಿ ಕೈಯಲ್ಲಿ ಕೊಂತವನ್ನು ಹಿಡಿದು ತೇರಿನ ಮುಂದಿರುತ್ತಾನೆ. ತೇರು ನಿಧಾನವಾಗಿ ಪಶ್ಚಿಮಾಭಿಮುಖವಾಗಿ ನಡೆಯುತ್ತದೆ. ಎತ್ತರದ್ದಾದ್ದರಿಂದ ರಭಸವಾಗಿ ಎಳೆಯಲು ಆಗುವುದಿಲ್ಲ. ತೇರಿನ ಹಿಂದೆ ಮುಂದೆ ಅಕ್ಕಪಕ್ಕಗಳಲ್ಲಿ ಜನರ ಪ್ರವಾಹವೇ ನಡೆದು ಬರುತ್ತದೆ. ಹರಕೆ ಮಾಡಿಕೊಂಡವರು ಮತ್ತೆ ಮತ್ತೆ ಹಣ್ಣುದವನ ಎಸೆಯುತ್ತಾ ಅಡ್ಡ ಬೀಳುತ್ತಾರೆ. ಹಿಂದಿನ ಕಾಲದಲ್ಲಿ ಇಂತಹವರು ತೇರಿನ ಗಾಲಿಗೆ ತಲೆ ಕೊಟ್ಟು ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರಂತೆ. ಈಗ ಆ ಪದ್ಧತಿ ಇಲ್ಲ. ತೇರಿನ ಮುನ್ನಡೆ ಆಚಾರಿಯ ಹಿಡಿತದಲ್ಲಿರುತ್ತದೆ. ನಿಲ್ಲಿಸಬೇಕೆಂದರೆ ಮುಂದಿನ ಎರಡು ಚಕ್ರಗಳಿಗೆ ಕೊಂತ ಅಡ್ಡ ಇಡುತ್ತಾನೆ. ಎಡಬಲಕ್ಕೆ ತಿರುಗಿಸುವಾಗ ಒಂದು ಚಕ್ರಕ್ಕೆ ಕೊಂತ ಕೊಟ್ಟು ತಿರುಗಿಸುತ್ತಾನೆ.

ಪಶ್ಚಿಮಾಭಿಮುಖವಾಗಿ ಗುಡಿಹಿಂದಲಮ್ಮನ ಗುಡಿಯವರೆಗೆ ಹೋದ ತೇರು ಉತ್ತರಾಭಿಮುಖವಾಗುತ್ತದೆ. ಸ್ವಲ್ಪ ದೂರ ಉತ್ತರಾಭಿಮುಖವಾಗಿ ಹರಿದು ಪೂರ್ವಾಭಿಮುಖವಾಗುತ್ತದೆ. ಇಲ್ಲಿಗೆ ತೇರು ಅರ್ಧ ಪ್ರದಕ್ಷಿಣೆ ಮುಗಿಸಿದಂತೆ. ಜನರ ಹರ್ಷೋದ್ಗಾರ, ಹಣ್ಣುದವನದ ಎಸೆತ ನಡೆಯುತ್ತಲೇ ಇರುತ್ತದೆ. ಪೂರ್ವಾಭಿಮುಖವಾಗಿ ಕ್ಷೇತ್ರದ ಕೊನೆಯವರೆಗೆ ಹೋದ ತೇರು ದಕ್ಷಿಣಾಭಿಮುಖವಾಗಿ ತಿರುಗುತ್ತದೆ. ಅಲ್ಲಿಂದ ಸ್ವಲ್ಪ ದೂರ ಬಂದು ಹೊರಟ ಸ್ಥಳ ತಲುಪುತ್ತದೆ. ದೇವಾಲಯದ ಸುತ್ತಿನ ಸುಮಾರು ಒಂದು, ಒಂದೂಕಾಲು ಕಿ. ಮೀ. ಪ್ರದಕ್ಷಿಣೆ ಮಾಡಲು ಗಂಟೆಗಟ್ಟಲೆ ಕಾಲ ಹಿಡಿಯುತ್ತದೆ. ಮತ್ತೆ ದೇವಿಗೆ ಪೂಜೆ ಸಲ್ಲಿಸಿ ತೇರಿನಿಂದಿಳಿಸಿ ದೇವಾಲಯದ ಜಗುಲಿಗೆ ತೆಗೆದುಕೊಂಡು ಹೋಗುತ್ತಾರೆ. ಇಲ್ಲಿಗೆ ತೇರು ಮುಗಿಯುತ್ತದೆ.


ದೇವಾಲಯದ ಮುಂದಿರುವ ತೋಪಿನಲ್ಲಿ ಜಾತ್ರೆ ಸೇರುತ್ತದೆ. ಮಿಠಾಯಿ, ಕಡಲೇಪುರಿ, ಬೆಂಡು-ಬತಾಸುಗಳ ಅಂಗಡಿಗಳೇ ಹೆಚ್ಚು. ಇನ್ನು ಸ್ತ್ರೀಯರಿಗೆ ಬೇಕಾದ ಟೇಪು, ಕನ್ನಡಿ, ತಲೆ ಪಿನ್ನು ಮುಂತಾದವುಗಳು ಈಚೆಗೆ ಗ್ರಾಮಾಂತರ ಪ್ರದೇಶವನ್ನು

ಪ್ರವೇಶಿಸುತ್ತಿರುವ ಮುಖಕ್ಕೆ, ಉಗುರುಗಳಿಗೆ ಹಾಕುವ ಬಣ್ಣ, ಪೌಡರು ಮುಂತಾದವುಗಳ ನಕಲಿ ಮಾಲುಗಳೂ ಅಲ್ಲಲ್ಲಿ ಕಾಣುತ್ತವೆ. ಒಂದೆರಡು, ಟಾರ್‌ಪಾಲ್ ಮತ್ತು ಗೋಣಿತಾಟುಗಳಿಂದ ಮಾಡಲ್ಪಟ್ಟ 'ಟೀ ಸ್ಟಾಲ್' ಗಳೂ ಕೂಡ ಈಚೆಗೆ ಕಂಡುಬರುತ್ತಿವೆ. ಇವಲ್ಲದೆ ಜಾತ್ರೆಯಲ್ಲಿ ಭಿಕ್ಷುಕರೂ, ಜನಪದ ಮನರಂಜಕರು ಕೆಲವರು ಅಲ್ಲಲ್ಲಿ ತಮ್ಮ ಪ್ರದರ್ಶನ ನೀಡುತ್ತಿರುತ್ತಾರೆ. ಕೋಲು ಹುಯ್ಯುವವರಂತೂ ಅನೇಕ ತಂಡಗಳೇ ತಮ್ಮ ತಮ್ಮ ಶಕ್ತಿ ಪ್ರದರ್ಶನ ಮಾಡುತ್ತಿರುತ್ತಾರೆ. ಹೆಂಗಸರು, ಅದರಲ್ಲೂ ಪರಿಜನ ಹೆಂಗಸರು ಗುಂಪು ಗುಂಪಾಗಿ ಮಾಯಮ್ಮನ ಬಗ್ಗೆ ಪದ ಹೇಳುತ್ತಿರುತ್ತಾರೆ. ಈ ಜಾತ್ರೆಯಲ್ಲಿ ಹೆಂಗಸರು ಮಕ್ಕಳದೇ ಪ್ರಧಾನ. ಒಟ್ಟಿನಲ್ಲಿ ಏಳೂರು ಜನರ ಜೊತೆಗೆ ಅವರ ನೆಂಟರಿಷ್ಟರೂ ಸೇರಿ ಜಾತ್ರೆ ಗಿಜಿ ಗಿಜಿ ಎನ್ನುತ್ತಿರುತ್ತದೆ.

ಮಂಗಳವಾರ ಬೆಳಿಗ್ಗೆಯಿಂದಲೇ ಜಾತ್ರೆ ಸೇರಲಾರಂಭಿಸಿ ಅಂದು ಸಂಜೆಯ ಹೊತ್ತಿಗೆ ಪರಿಪೂರ್ಣವಾಗುತ್ತದೆ. ಮಿಠಾಯಿ ಅಂಗಡಿಗಳು ಇನ್ನೂ ಒಂದು ದಿನ ಮುಂಚಿತವಾಗಿಯೇ ಬಂದು ಆರಂಭಿಸುತ್ತವೆ. ಬಂದ ನೆಂಟರಿಷ್ಟರಿಗೆಲ್ಲಾ ಮಿಠಾಯಿ ಕೊಳ್ಳುವ ಕಾತುರವಾದರೆ, ಬತಾಸು, ಬೆಂಡು, ಕಲ್ಯಾಣಸೇವೆ, ಕಾರಸೇವೆ, ಮೈಸೂರುಪಾಕುಗಳ ಅಂಗಡಿಗಳಿಗೆ ನೂಕು ನುಗ್ಗಲು. ಕಡಲೆಪುರಿಯ ವ್ಯಾಪಾರವೂ ಭರಾಟೆಯಿಂದಲೇ ನಡೆಯುತ್ತದೆ. ಸಾಮಾನ್ಯವಾಗಿ ತೇರಿನ ದಿನದ ಜಾತ್ರೆಯೇ ತುಂಬು ಜಾತ್ರೆ. ಮಂಗಳವಾರ ಸಣ್ಣದಾಗಿ ಆರಂಭವಾದದ್ದು ಬುಧವಾರ ತುಂಬಿತುಳುಕಿ, ಗುರುವಾರ ಕರಗಿ ಹೋಗುತ್ತದೆ.


ತೇರಿನ ನಂತರ ಜಾತ್ರೆಯಲ್ಲಿ ತಮತಮಗೆ ಬೇಕಾದುದನ್ನು ಕೊಂಡ ಜನರು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಲಾರಂಭಿಸುತ್ತಾರೆ. ದೇವಾಲಯದಲ್ಲಿ ಹಿಂದೆ ಚಿಕ್ಕಮ್ಮನ ಗುಡಿಯಲ್ಲಿ ಪೂಜೆ ನಡೆಯುತ್ತಲೇ ಇರುತ್ತದೆ. ಮಂಗಳವಾರ ರಾತ್ರಿಯಿಡೀ ಮತ್ತು ಬುಧವಾರ ಹಗಲಿಡೀ ರಂಗ, ತೇರು ಜಾತ್ರೆಗಳಲ್ಲಿ ತೊಡಗಿದ ಜನರು ಸುಸ್ತಾಗಿರುತ್ತಾರೆ. ಆದ್ದರಿಂದ ಬುಧವಾರ ರಾತ್ರಿ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ರಾತ್ರಿಯ ಊಟದ ನಂತರ ವಿಶ್ರಾಂತಿಯೇ ಅವರ ಗುರಿಯಾಗಿರುತ್ತದೆ.

* * * * *






































# ಗ್ರಾಮಯಾತ್ರೆ - ಓಕುಳಿ

ಯುಗಾದಿಯಂದು ಪಟ್ಟ ಕಟ್ಟಿಕೊಂಡು ಕುಳಿತ ಮಾಯಮ್ಮ ದಿನ ಸಂಜೆ ಓಕುಳಿಯಾಡಿ ತನ್ನ ವಾರ್ಷಿಕ ದರಬಾರನ್ನು ಮುಗಿಸುವ ದಿನ. ಹಬ್ಬಕ್ಕೆ ಬಂದ ನೆಂಟರಿಷ್ಟರೂ ಆಗಲೇ ತಮ್ಮ ತಮ್ಮ ಊರಿನ ನೆನಪು ಮಾಡಿಕೊಂಡು ಹೊರಡಲು ಆತುರ ಪಡುತ್ತಿರುತ್ತಾರೆ. ಆದರೆ ಬಂಧುಗಳು ಬಿಡುವುದಿಲ್ಲ. ತೀರ ಹತ್ತಿರದ ನೆಂಟರು, ಮನೆಯ ಹೆಣ್ಣುಮಕ್ಕಳು ಮುಂತಾದವರು ತಕರಾರು ಮಾಡುವಂತಿಲ್ಲ. ಗುರುವಾರ ಬೆಳಿಗ್ಗೆಯೇ ದೇವರು ಊರ ಮೇಲೆ ಹೊರಡುವುದರಿಂದ ಮೂಲ ದೇವಾಲಯದಲ್ಲಿ ಏನೂ ಚಟುವಟಿಕೆಗಳಿರುವುದಿಲ್ಲ. ಜನರೆಲ್ಲರೂ ಆಯಾ ಊರುಗಳಲ್ಲಿಯೇ ಕೇಂದ್ರೀಕೃತರಾಗಿರುತ್ತಾರೆ. ಒಂದು ದಿನ ಎರಡು ದಿನ ಬೇರೆ ಬೇರೆ ಊರುಗಳಿಗೆ ಹೋಗಿ ಬಂದ ದೇವತೆ ಗುರುವಾರ ಗೊರವಿ ಮತ್ತು ಹೆತ್ತಗೋನಹಳ್ಳಿಗೆ ದಯಮಾಡಿಸುತ್ತಾಳೆ.

ಗುರುವಾರ ಬೆಳಿಗ್ಗೆ ಎಂಟೊಂಬತ್ತು ಗಂಟೆಯ ಹೊತ್ತಿಗೆ ದೇವರು ತರಲು ಹೋಗುವ ಬಗ್ಗೆ ಕುಳವಾಡಿ ಸಾರುತ್ತಾನೆ. ಇದಕ್ಕೆ ಸಾಮಾನ್ಯವಾಗಿ ಗಂಡಸರು ಹೋಗುತ್ತಾರೆ. ಸಾರಿಕೆಯಾದ ಕೆಲವು ಕಾಲದಲ್ಲಿ ಮನೆಗೊಬ್ಬರಂತೆ ಬಂದು ರಂಗದಲ್ಲಿ ಸೇರುತ್ತಾರೆ. ಎಲ್ಲರೂ ಬಂದು ಸೇರಿದ ಮೇಲೆ ವಾದ್ಯ ಸಮೇತ ದೇವಾಲಯಕ್ಕೆ ಹೊರಡುತ್ತಾರೆ. ಪ್ರತಿ ಊರಿಗೂ ಇಂತಹದೆ ವಾಹನದ ಮೇಲೆ ಕುಳಿತು ದೇವಿ ಹೋಗಬೇಕೆಂದು ನಿಯಮವಿದೆ. ಇದು ಹಕ್ಕೂ ಹೌದು. ಹಬ್ಬದ ದಿನಗಳಲ್ಲಿ ಮಾತ್ರ ಈ ಕಟ್ಟುನಿಟ್ಟು ಮತ್ತು ಅದರಂತೆಯೇ ಆಗಬೇಕು. ಮಿಕ್ಕ ದಿನಗಳಲ್ಲಿ ಯಾವ ಊರಿಗೆ ಯಾವ ವಾಹನ ಬೇಕಾದರೂ ಹೋಗಬಹುದು. ಮಾಯಮ್ಮ ಆನೆ, ಹುಲಿ, ಕುದುರೆ ವಾಹನಗಳಲ್ಲದೆ, ಪಲ್ಲಕ್ಕಿ, ಅಡ್ಡೆಗಳಲ್ಲಿಯೂ ಹೋಗುವುದುಂಟು. ಊರಿನವರು ತಮ್ಮ ಊರಿಗೆ ನಿಗದಿಯಾದ ವಾಹನವನ್ನು ಬಿಗಿದು ಸಿದ್ಧಪಡಿಸುತ್ತಾರೆ. ಆನಂತರ ದೇವಿಯನ್ನು ಅದರ ಮೇಲೆ ಕೂರಿಸಲಾಗುತ್ತದೆ. ಒಡವೆ, ವಸ್ತ್ರಗಳಿಂದ ಅಲಂಕಾರಗೊಂಡ ದೇವತೆಯ ವಿಗ್ರಹವನ್ನು ಭಕ್ತರು ವಾದ್ಯಸಮೇತ ತಮ್ಮ ಊರಿಗೆ ತೆಗೆದುಕೊಂಡು ಹೋಗುವರು. ದೇವತೆಯ ಬಂಟರು, ವೀರಮಕ್ಕಳು ಇತ್ಯಾದಿ ಪ್ರಶಂಸೆಗೆ ಪಾತ್ರರಾದ ವೀರಣ್ಣ, ಕೆಂಚಣ್ಣ ಎಂಬ ಸೋಮಗಳೂ ಈ ಪ್ರವಾಸದಲ್ಲಿ ದೇವಿಯ ಮುಂದೆ ಸದಾ ಇದ್ದೇ ಇರುತ್ತವೆ.

ಊರ ಹತ್ತಿರ ಬರುತ್ತಿದ್ದಂತೆಯೇ ವಾದ್ಯಗಳು ಭೋರ್ಗರೆಯುತ್ತವೆ. ಕೊಂಬು ಕಹಳೆಗಳು ಊಳಿಡುತ್ತವೆ. ಊರಿನ ಹೆಂಗಸರು ಮಕ್ಕಳೆಲ್ಲ ದೇವರು ಬಂತು, ದೇವರು ಬಂತು ಎಂದು ರಂಗದತ್ತ ಓಡಿಬರುತ್ತಾರೆ. ಊರ ಹಿರಿಯರು- ಮುಖ್ಯಸ್ಥರು ಊರಿನ ಹೆಬ್ಬಾಗಿಲಿನಲ್ಲಿ ಹಗಲು ದೀವಟಿಗೆ ಬಿರುದು ಬಾವಲಿಗಳೊಂದಿಗೆ ದೇವತೆಯನ್ನು ಸ್ವಾಗತಿಸಲು ನಡುಕಟ್ಟಿ ನಿಲ್ಲುತ್ತಾರೆ. ಮುತ್ತೈದೆಯರು ಆರತಿ ಬೆಳಗಿ ದೃಷ್ಟಿತೆಗೆಯಲು ಅರಿಶಿನದ ನೀರು ಹಿಡಿದು ನಿಲ್ಲುತ್ತಾರೆ. ದೇವತೆ ಊರ ಹೆಬ್ಬಾಗಿಲು ತಲುಪಿದೊಡನೆ

ಈಡುಗಾಯಿ ಹಾಕುತ್ತಾರೆ. ತಮ್ಮ ಭಕ್ತಿ ಗೌರವಗಳನ್ನು ಸಲ್ಲಿಸಿ ದೇವತೆಯನ್ನು ತಮ್ಮ ಊರಿಗೆ ಸ್ವಾಗತಿಸಿ ರಂಗಕ್ಕೆ ಕರೆದೊಯ್ಯುತ್ತಾರೆ.

ಆ ದಿನ ರಂಗವನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ರಂಗದ ಪಶ್ಚಿಮಭಾಗದಲ್ಲಿ ಪೂರ್ವಾಭಿಮುಖವಾಗಿ ಚಪ್ಪರ ಹಾಕಿರುತ್ತಾರೆ. ರಂಗದ ಸುತ್ತಲೂ ಮಾವಿನ ಸೊಪ್ಪಿನ ತೋರಣ ಕಟ್ಟಿರುತ್ತಾರೆ. ನಾಲ್ಕು ಮೂಲೆಗೆ ಮತ್ತು ರಂಗದ ಮಧ್ಯದ ಕಲ್ಲಿಗೆ ಹೊಸ ಬಾಳೆಕಂಬಗಳನ್ನು ಕಟ್ಟಿರುತ್ತಾರೆ. ಇಂತಹ ಹಸಿರುವಾಣಿ ಚಪ್ಪರದಲ್ಲಿ ದೇವತೆ ಸ್ವಲ್ಪ ಹೊತ್ತು ವಿಶ್ರಮಿಸಿ ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳುವುದು ಸಂಪ್ರದಾಯ. ಈ ಸಮಯದಲ್ಲಿಯೂ ದೇವಿಗೆ ಬಿಡುವಿಲ್ಲ. ತೊಂದರೆಗೊಳಗಾದವರು ತಮ್ಮ ಅಹವಾಲುಗಳನ್ನು ಹೇಳಿಕೊಂಡು ಪರಿಹಾರ ಪಡೆಯುತ್ತಾರೆ. ದೆವ್ವ, ಪೀಡೆ, ಪಿಶಾಚಿಯಿಂದ ಅನೇಕ ರೀತಿಯ ಅನಿಷ್ಟಗಳಿಗೆ ಗುರಿಯಾದವರು ಬಂದು ತಮ್ಮ ಕಷ್ಟವನ್ನು ದೇವಿಗೆ ಅರಿಕೆ ಮಾಡಿಕೊಳ್ಳುತ್ತಾರೆ. ಅಂತಹ ಅನಿಷ್ಟವನ್ನು ಪರಿಹರಿಸುವುದು ದೇವಿಯ ವೀರಮಕ್ಕಳಾದ ವೀರಣ್ಣ, ಕೆಂಚರಾಯರದು. ಅವರು ತಮ್ಮ ಕೈಯ ಚಾವಟಿಯಿಂದ ಒಂದು ಏಟು ಕೊಟ್ಟರೆ ಆ ವ್ಯಕ್ತಿಯ ಅನಿಷ್ಟಗಳು ಪರಿಹಾರವಾಗುತ್ತವೆಂಬುದು ನಂಬಿಕೆ. ದೇವಿ ರಂಗದ ವಿಶ್ರಾಂತಿಯಲ್ಲಿರುವಾಗ ಹರಕೆ ಹೊತ್ತವರು ಬೇಕಾದರೆ ಬಂದು ಪೂಜೆ ಸಲ್ಲಿಸಬಹುದು.

ಕೆಲಹೊತ್ತಿನ ವಿಶ್ರಾಂತಿಯನಂತರ ದೇವಿ ಊರೊಳಗೆ ಬೀದಿಬೀದಿಗೆ ಮನೆಮನೆಗೆ ದಯಮಾಡಿಸುತ್ತಾಳೆ. ಸಾಮಾನ್ಯವಾಗಿ ಪ್ರತಿಯೊಂದು ಮನೆಯವರೂ ದೇವಿ ತಮ್ಮ ಮನೆಯ ಮುಂದೆ ಬಂದೊಡನೆಯೇ ಈಡುಗಾಯಿ ಹಾಕುತ್ತಾರೆ. ಆ ಮೇಲೆ ಹಣ್ಣುಕಾಯಿ ಮಾಡಿಸಿ ತೀರ್ಥ ಹಾಕಿಸಿಕೊಳ್ಳುತ್ತಾರೆ. ಕಡೆಯಲ್ಲಿ ಆರತಿ ಬೆಳಗಿ ತಮ್ಮ ಭಕ್ತಿ ಗೌರವಗಳನ್ನು ಸಲ್ಲಿಸಿ ಮುಂದಿನ ಮನೆಗೆ ಬೀಳ್ಕೊಡುತ್ತಾರೆ. ದೇವಿಯ ಈ ಮೆರವಣಿಗೆಯಲ್ಲಿ ಸೋಮನ ಕುಣಿತ ಮತ್ತು ಹೊಗಳಿಕೆಯ ಹಾಡುಗಳು ಪ್ರಮುಖವಾದವು. ಸೋಮಗಳು ಎಂದರೆ ದೇವತೆಯ ಬಂಟರು, ವೀರಮಕ್ಕಳು. ಮೂಲದೇವಾಲಯದ ಗರ್ಭಗುಡಿಯ ಮುಂದೂ ಇಬ್ಬರಿದ್ದಾರೆ. ಹೊರಗೆ ಹೋಗುವಾಗ ದೇವಿಯ ರಕ್ಷಣೆಗಿರುವ ಇವರನ್ನು ವೀರಣ್ಣ, ಕೆಂಚಣ್ಣ ಎಂದು ಕರೆಯುತ್ತಾರೆ. ದೇವತೆಯ ಮೆರವಣಿಗೆಯ ಮಧ್ಯ ಇವರು ತಮಟೆಯ ಲಯಕ್ಕನುಸಾರವಾಗಿ ಕುಣಿಯುತ್ತಾರೆ.

ಸೋಮನ ಮುಖವಾಡ ಒಂದು ಒಂದೂವರೆ ಅಡಿ ಸುತ್ತಳತೆ ಇರುತ್ತದೆ. ಅದರಲ್ಲಿ ದಪ್ಪದಾದ ಮುಖ, ಮೂಗು ಕಣ್ಣುಗಳನ್ನು ಕೆತ್ತಿ ಕೆಂಪನೆಯ ಬಣ್ಣ ಹಾಕಿರುತ್ತಾರೆ. ತಲೆಯ ಭಾಗದಲ್ಲಿ ಪೇಟದಂತೆ ಬಣ್ಣದ ಬಟ್ಟೆಗಳನ್ನು ಸುತ್ತಿ ಹಿಂದೆ ಇಳಿಬಿಟ್ಟಿರುತ್ತಾರೆ. ಸೋಮನ ಕುಣಿತ ರಂಗದ ಕುಣಿತದ ಇನ್ನೊಂದು ಮಾದರಿಯಂತಿರುತ್ತದೆ. ಸೋಮನ ಮುಖವಾಡ ಧರಿಸುವವರು ಬಿಳಿ ಪಂಚೆಯ ಕಚ್ಚೆಹಾಕಿ ಬರಿಮೈಯಲ್ಲಿರುತ್ತಾರೆ. ಕೈಯಲ್ಲಿ ಬೆತ್ತ, ಅದಕ್ಕೆ ಗಗ್ಗರ, ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಎದೆಯ ಮೇಲೆ ಇಳಿಬೀಳುವಂತೆ ಕತ್ತಿನಿಂದ ಬಣ್ಣದ ಬಟ್ಟೆಗಳನ್ನು ಎರಡೂ ಕಡೆಗೂ ಇಳಿಬಿಟ್ಟಿರುತ್ತಾರೆ. ತಮಟೆಯವರು ಲಯಬದ್ಧವಾಗಿ ಬಡಿದಂತೆ ಇವರು ದೇವತೆಯ ಮುಂದೆ ಕುಣಿಯುತ್ತಾರೆ.

ಈ ಹಬ್ಬ ನಡೆಯುವುದು ಬೇಸಿಗೆಯ ಕಾಲದಲ್ಲಿ. ಸೋಮನ ಕುಣಿಯುವವರು, ತಮಟೆ ಬಡಿಯುವವರು ಇವರಿಗೆಲ್ಲಾ ಮಧ್ಯೆ ಮಧ್ಯೆ ವಿಶ್ರಾಂತಿಯೂ ಬೇಕಾಗುತ್ತದೆ. ಈ ಕಾರಣಕ್ಕಾಗಿ ಹೊಗಳಿಕೆಯ ಪದಗಳು ಹುಟ್ಟಿಕೊಂಡಿರಬೇಕೆನಿಸುತ್ತದೆ. ಸೋಮನ ಕುಣಿತ ತಮಟೆ ಬಡಿತ ಎರಡನ್ನೂ ನಿಲ್ಲಿಸಿ ದೇವಿಯ ಯಾವುದಾದರೊಂದು ಶಕ್ತಿಯನ್ನು ಕುರಿತು ಹಾಡುತ್ತಾರಂತೆ. ಅರ್ಧ ಹಾಡಿದ ಮೇಲೆ ಮತ್ತೆ ಒಂದು ಸಾರಿ ತಮಟೆ ಸದ್ದು ಮಾಡಿ ಉಳಿದರ್ಧ ಹಾಡುತ್ತಾರಂತೆ. ಆಮೇಲೆ ಮತ್ತೆ ಸೋಮನ ಕುಣಿತ ಆರಂಭವಾಗುತ್ತದೆ. ಈಗ ಹರಿಜನರು ತಮಟೆ ಬಡಿಯುವುದು ಮತ್ತು ಹಾಡುವುದನ್ನು ಬಿಟ್ಟಿದ್ದಾರೆಂದು ಹಿರಿಯರು ಹೇಳುತ್ತಾರೆ. ಆದ್ದರಿಂದ ಆ ಪದದ ಒಂದು ಉದಾಹರಣೆಯೂ ಈಗ ಸಿಗುವುದಿಲ್ಲ. ಈಗ ಇಂತಹ ಉತ್ಸವಗಳಿಗೆ ವಾದ್ಯಗಳ ಏರ್ಪಾಡು ಮಾಡುವ ಪದ್ಧತಿ ಬೆಳೆದಿದೆ.

ಊರೆಲ್ಲಾ ಪ್ರದಕ್ಷಿಣೆ ಮಾಡಿಸಿಯಾದ ಮೇಲೆ ದೇವತೆಯನ್ನು ರಂಗದ ಚಪ್ಪರಕ್ಕೆ ತಂದು ಇಡುತ್ತಾರೆ. ಇಷ್ಟು ಹೊತ್ತಿಗೆ ಮಧ್ಯಾಹ್ನವಾಗಿರುತ್ತದೆ. ಆ ಉರಿಬಿಸಿಲಿನಲ್ಲಿ ಈ ದೇವಿಯ ಮುಂದೆ ರಂಗ ಕುಣಿಯುತ್ತಾರೆ. ಕೋಲು ಹುಯ್ಯುತ್ತಾರೆ. ಹೆಂಗಸರು ಹಾಡುತ್ತಾರೆ. ಪೂಜೆ ನಡೆಯುತ್ತದೆ. ಕಡೆಗೆ ಅಲ್ಲಿ ನಡೆದ ಜನರಿಗೆಲ್ಲಾ ಚರಪು ಹಂಚುತ್ತಾರೆ. ಇಲ್ಲಿಗೆ ಆ ಊರಿನ ದೇವಿಯ ಮೆರವಣಿಗೆ ಮುಗಿಯುತ್ತದೆ. ಆಕೆ ನಿಗದಿಯಾದ ಮುಂದಿನ ಊರಿಗೆ ಹೊರಡುತ್ತಾಳೆ. ಊರವರೆಲ್ಲಾ ಊರಬಾಗಿಲವರೆಗೆ ಹೋಗಿ ದೇವಿಯನ್ನು ಭಕ್ತಿಪೂರ್ವಕವಾಗಿ ಬೀಳ್ಕೊಡುತ್ತಾರೆ. ಗುರುವಾರ ಗೊರವಿಯಿಂದ ಹೊರಟದೇವತೆ ಹೆತ್ತಗೋನಹಳ್ಳಿಗೆ ಹೋಗುತ್ತಾಳೆ. ಅಲ್ಲಿ ಮತ್ತೆ ಇದೇ ಆಚರಣೆ ಮುಂದುವರೆಯುತ್ತದೆ.

ಊರಿನಿಂದ ದೇವಿ ನಿರ್ಗಮಿಸಿದೊಡನೆಯೇ ಜನರು ಊಟದತ್ತ ಗಮನ ಹರಿಸುತ್ತಾರೆ. ಆ ದಿನ ದೇವಿಯೊಂದಿಗೆ ಅಂಗಡಿ ಮುಂಗಟ್ಟುಗಳೂ ಊರಿಗೆ ಬಂದಿರುತ್ತವೆ. ಜಾತ್ರೆಗೆ ಹೋಗದವರು ಅವಸರವಾಗಿ ತಮಗೆ ಬೇಕಾದುದನ್ನು ಕೊಳ್ಳುವವರು ಕೊಳ್ಳುತ್ತಾರೆ. ಈ ದಿನವೂ ಶಾವಿಗೆ ಕಾಯಾಲು ಇಲ್ಲವೇ ಒಬ್ಬಟ್ಟು ಮಾಡುತ್ತಾರೆ.

ಗುರುವಾರ ಹಬ್ಬದ ಕಡೆಯ ದಿನವಾದ್ದರಿಂದ ಸಂಜೆ ಓಕುಳಿ ಇರುತ್ತದೆ. ಊಟವಾದ ಮೇಲೆ ಜನರು ವಿಶ್ರಾಂತಿ ಪಡೆಯುತ್ತಾರೆ. ಸುಮಾರು ಮೂರು ಮೂರುವರೆ ಗಂಟೆಯ ಹೊತ್ತಿಗೆ ತಮಟೆಯ ಸದ್ದು ಕೇಳಿ ಬರುತ್ತದೆ. ಅದು ಓಕುಳಿಗಾಗಿ ಜನರು ಹೊರಡಲು ಸೂಚನೆ. ಮನೆಯ ಹೆಂಗಸರು ಮಕ್ಕಳು ಸಿಂಗರಿಸಿಕೊಂಡು ದೇವಾಲಯದತ್ತ ಹೊರಡುತ್ತಾರೆ.

ಮೂಲ ದೇವಾಲಯದ ಎದುರಿಗೆ ಹೆಬ್ಬಾಗಿಲ ಆಚೆ ಕಲ್ಲಿನ ಎರಡು ಮೂರು ಅಡಿ ಆಳದ ಓಕುಳಿ ಬಾವಿ ಇದೆ. ಅಂದು ಇದನ್ನು ಸ್ವಚ್ಛಮಾಡಿ, ನೀರು ತುಂಬಿ ಅರಿಶಿನ, ಕುಂಕುಮ ಕದರಿ ಓಕುಳಿ ತಯಾರಿಸಿರುತ್ತಾರೆ. ಹೆತ್ತಗೋನಹಳ್ಳಿಯ ಮೆರವಣಿಗೆ ಮತ್ತು ಪೂಜೆಯನ್ನು ಮುಗಿಸಿದ ಮಾಯಮ್ಮ ಮತ್ತು ಚಿಕ್ಕಮ್ಮ ಐದು ಐದೂವರೆಗೆ ಇಲ್ಲಿಗೆ ಬರುತ್ತಾರೆ. ಅವರಿಬ್ಬರನ್ನೂ ಕೂರಿಸಿ ಓಕುಳಿಯಾಡಿಸುತ್ತಾರೆ. ಆ ಓಕುಳಿ ಅವರ ಭಕ್ತರ ಸಂತೋಷಕ್ಕೆಂದು ಹೇಳುತ್ತಾರೆ. ಆಯಾಸ ಪರಿಹಾರದ ಸ್ನಾನ ಎಂದೂ ಹೇಳುತ್ತಾರೆ. ಓಕುಳಿಯಾಟ ಮುಗಿದ

ನಂತರ ದೇವತೆಯನ್ನು ಮೂಲ ದೇವಾಲಯಕ್ಕೆ ಕರೆದೊಯ್ಯುತ್ತಾರೆ. ಇಲ್ಲಿಗೆ ಪೆತ್ತಗೋನಹಳ್ಳಿ ಮಾಯಮ್ಮನ ಹಬ್ಬ ಮುಗಿಯುತ್ತದೆ.

ಗುರುವಾರವೂ ಜಾತ್ರೆ ದಟ್ಟವಾಗಿಯೇ ಇರುತ್ತದೆ. ಕೋಲು ಹುಯ್ಯುವವರೂ, ಹಾಡುವವರೂ ಇರುತ್ತಾರೆ. ಹೆಂಗಸರು ಮಕ್ಕಳದೇ ಜಾತ್ರೆಯ ತುಂಬಾ ಓಡಾಟ. ಬಳೆ ತೊಡುವವರು ಟೇಪು ಕೊಳ್ಳುವವರಿಂದ ಭಕ್ತಿಯಿಂದ ಹಣ್ಣುದವನ ಕೊಳ್ಳುವವರವರೆಗೆ ವ್ಯಾಪಾರ ನಡೆಯುತ್ತದೆ. ನಿಧಾನವಾಗಿ ಕತ್ತಲಾವರಿಸುತ್ತದೆ. ಜನರು ತಮ್ಮ ತಮ್ಮ ಊರುಗಳಿಗೆ ತೆರಳುತ್ತಾರೆ. ದೇವಾಲಯದ ಮುಖ್ಯಸ್ಥರು ಸಭೆ ಸೇರಿ ಒಡವೆ ವಸ್ತ್ರಗಳನ್ನು ಹಕ್ಕುದಾರರಿಗೆ ಒಪ್ಪಿಸುತ್ತಾರೆ. ತೇರಿನ ಗಾಲಿಗಳು ತೇರಿನ ಮನೆ ಸೇರುತ್ತವೆ. ರಂಗ ಬರಿದಾಗುತ್ತದೆ. ಮುಂದಿನ ಯುಗಾದಿಯವರೆಗೆ ಇಲ್ಲಿ ಎಲ್ಲೆಡೆ ಮೌನ, ನಿಶ್ಶಬ್ದ.

* * * * *

# ವಿಧಿ ನಿಷೇದಗಳು

ಪ್ರತಿಯೊಂದು ದೇವ, ದೇವತೆಗೂ ಅವರದೇ ಆದ ಅನೇಕ ವಿಧಿ ನಿಷೇಧಗಳು ಆಚರಣೆಗಳು ಇದ್ದೇ ಇರುತ್ತವೆಯೆಂದರೆ ಅತಿಶಯೋಕ್ತಿಯಾಗುವುದಿಲ್ಲ. ಆ ದೇವದೇವತೆಗಳು ಬೆಳೆದಂತೆಲ್ಲಾ ಪ್ರಸಿದ್ಧಿ ಪಡೆದಂತೆಲ್ಲ ಅವುಗಳಿಗೆ ಮತ್ತಷ್ಟು ಸೇರಿಕೊಳ್ಳುತ್ತಾ ಹೋಗುತ್ತವೆ. ಇವುಗಳಲ್ಲಿ ಕೆಲವು ಮೂಢನಂಬಿಕೆಗಳು, ಕೆಲವು ವ್ಯವಹಾರಿ ಮತ್ತೆ ಕೆಲವು ವಾಸ್ತವವಾಗಿರುತ್ತವೆ. ಜಾತಿಮತಗಳ ಕಡೆಯಿಂದಲೂ ಕೆಲವು ಬಂದು ಸೇರಿಕೊಂಡಿರುತ್ತವೆ. ಹೆತ್ತಗೋನಹಳ್ಳಿ ಮಾಯಮ್ಮ ಬಹಳ ಪ್ರಸಿದ್ಧವಾದ ದೇವತೆಯೇನಲ್ಲ. ದೊರೆಯುವ ವಿವಿಧ ಸ್ಥಳಕತೆಗಳ ಆಧಾರದ ಮೇಲೆ ಇದು ಒಂದು ಕಾಲದಲ್ಲಿ ಸಾಕಷ್ಟು ಪ್ರಸಿದ್ಧವಾದ ದೇವತೆ ಆಗಿದ್ದಿರಬಹುದೆಂದು ಹೇಳಬಹುದು. ಪೂರ್ವದಲ್ಲಿ ಹಟ್ಟಬೇವುಕಲ್ಲು, ದಕ್ಷಿಣದಲ್ಲಿ ಸಾಲಿಗ್ರಾಮದವರೆಗೆ ಈ ದೇವತೆಯ ವ್ಯಾಪ್ತಿ ಇದ್ದಿತೆಂದು ಹೇಳಲವಕಾಶವಿದೆ. ಈಕೆ ಮೈಸೂರು ಹತ್ತಿರದ ವರಕೋಡು ಗ್ರಾಮದಿಂದ ಬಂದವಳೆಂಬ ಕತೆಯೊಂದಿದೆ.ವರಕೋಡು ಗಂಗರ ಕಾಲದ ಒಂದು ಪ್ರಸಿದ್ಧ ನಗರ ಎಂದು ವಿದ್ವಾಂಸರ ಅಭಿಪ್ರಾಯವಿದೆ. ಈ ಎಲ್ಲ ಹಿನ್ನೆಲೆಯಲ್ಲಿಯೂ ಈ ದೇವತೆಯ ಬಗೆಗಿನ ವಿಧಿ ನಿಷೇಧಗಳು ಈಗ ಕಡಿಮೆ ಎಂದೇ ಹೇಳಬೇಕು. ಹಿಂದೆ ಇದ್ದಂತಹವನ್ನು ಮತ್ತು ಈಗ ಇರುವ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಈ ದೇವತೆಯ ಉಗಮದ ಕತೆಯೊಂದು ಕಿರುಜಾತಿಯ ಹಜಾಮರವನು ಮದುವೆಯಾಗ ಬಯಸಿದುದರಿಂದ ಆತ್ಮಾರ್ಪಣೆ ಮಾಡಿಕೊಂಡ ಹೆಣ್ಣುಮಗಳೊಬ್ಬಳು ದೇವತೆಯಾದಳೆಂದು ಹೇಳುತ್ತದೆ. ಆದುದರಿಂದ ಯಾವುದೇ ಕಿರುಜಾತಿಯವರು ಈ ದೇವತೆಯ ಹಬ್ಬಹರಿದಿನಗಳಲ್ಲಿ ಪೂಜೆಪುನಸ್ಕಾರಗಳಲ್ಲಿ ಪಾಲುಗೊಳ್ಳುವಂತೆಯೇ ಇರಲಿಲ್ಲವಂತೆ. ಆದುದರಿಂದಲೇ ಈಕೆಯ ಉತ್ಸವ ಮುಂತಾದವುಗಳಲ್ಲಿ ಹರಿಜನರ ವಾದ್ಯ ಮಾತ್ರ ಬರುತ್ತಿತ್ತಂತೆ. ಹಜಾಮರು ಬಾರಿಸುವ ಓಲಗ ಇತ್ಯಾದಿಗೆ ಅವಕಾಶವೇ ಇರಲಿಲ್ಲವಂತೆ.

ಹರಿಜನರನ್ನು ಸಾಮಾನ್ಯವಾಗಿ ದೇವ ದೇವತೆಗಳಿಂದ ದೂರವಿಡುವ ಪದ್ಧತಿ ಇತ್ತಷ್ಟೇ ಅವರೆ ಅಲ್ಲಿ ಪ್ರಧಾನ ಗುಡಿಯ ಅಂಚಿನಲ್ಲೇ ಮತ್ತೊಂದು ಗುಡಿ ಕಟ್ಟಿ, ಅಲ್ಲಿ ಹರಿಜನರ ಪೂಜೆಗೆ ಏರ್ಪಾಟು ಮಾಡಲಾಗಿದೆ. ಇದನ್ನು ಚಿಕ್ಕಮ್ಮನ ಗುಡಿ ಎಂದೂ ಕರೆಯುತ್ತಾರೆ. ಹರಿಜನರು ಮತ್ತು ಒಕ್ಕಲಿಗರು ಅಣ್ಣತಮ್ಮಂದಿರು ಚಿಕ್ಕಮ್ಮ ದೊಡ್ಡಮ್ಮರ ಮಕ್ಕಳು. ಯಾವುದೋ ಕೆಟ್ಟ ಕೆಲಸ ಮಾಡಿದುದರಿಂದ ಅವರನ್ನು ಜಾತಿಯಿಂದ ಹೊರಹಾಕಲಾಯಿತಂತೆ. ಎಲ್ಲರೊಂದಿಗೇ ಮಡೆ ಹೊತ್ತು ತರುವ ಇವರು ಪೂಜೆಯನ್ನು ಮಾತ್ರ ತಮ್ಮ ಸಣ್ಣಗುಡಿಗೆ ಅರ್ಪಿಸುತ್ತಾರೆ. ರಂಗದ ಕಾರ್ಯ, ರಂಗವಲ್ಲಿ ವಾದ್ಯ ನುಡಿಸುವುದು ಎಲ್ಲದರಲ್ಲೂ ಸಮವಾಗಿ ಪಾಲುಗೊಳ್ಳುವ ಇವರಿಗೆ ಪ್ರಧಾನ ದೇವಾಲಯದೊಳಗೆ ಪ್ರವೇಶ ಮಾಡುವುದೊಂದೇ ನಿಷೇಧ. ಮಿಕ್ಕಂತೆ ಅಸ್ಪೃಶ್ಯತೆಯ ಯಾವ

ಸೋಂಕೂ ಇಲ್ಲ. ಇದು ಹಿಂದಿನಿಂದಲೂ ನಡೆದು ಬಂದುದೆಂದೂ ಹಿರಿಯರು ಹೇಳುತ್ತಾರೆ. ಈ ದೇವತೆಯ ಬಗೆಗೆ ಹೆಚ್ಚು ಸಾಹಿತ್ಯ ಹೊಂದಿರುವವರು ಈ ಪರಿಜನರೇ.

ಮಾಂಸಾಹಾರ ಈ ದೇವತೆಗೆ ನಿಷಿದ್ಧ. ಇದು ಈಕೆ ಬ್ರಾಹ್ಮಣ ಹೆಣ್ಣುಮಗಳಾಗಿದ್ದು ಒಕ್ಕಲಿಗರವನನ್ನು ಮದುವೆಯಾದಳು. ಆಕೆಯ ಬಾಣಂತಿತನದಲ್ಲಿ ಆಕೆಗೆ ಮಾಂಸದ ಅಡುಗೆ ಮಾಡಿದ್ದರಿಂದ ಆಕೆ ಕುಪಿತಳಾಗಿ ಆತ್ಮಾರ್ಪಣೆ ಮಾಡಿಕೊಂಡು ದೇವತೆಯಾದಳು ಎಂಬುದರಿಂದ ಬಂದಿರಬೇಕು. ಇನ್ನೊಂದು, ಹುತ್ತದ ಹತ್ತಿರ ಒಲೆ ಹೂಡಿದ ಶೆಟ್ಟಿಗೌಡರು ಮಾಂಸದ ಅಡುಗೆ ಮಾಡಿದುದರಿಂದ ಕುಪಿತಳಾದ ದೇವತೆ ಅವರು ಸಾಯುವಂತೆ ಮಾಡಿದಳೆಂದೂ ಆದುದರಿಂದ ಈಕೆಗೆ ಮಾಂಸದ ಅಡುಗೆ ನಿಷಿದ್ಧ ಎಂದೂ ಹೇಳುತ್ತಾರೆ.

ಸೂತಕದ ದಿನಗಳಲ್ಲಿ ಅಂತಹ ಮನೆಯವರು, ಅವರ ಹತ್ತಿರದ ದಾಯಾದಿಗಳು ಅಣ್ಣತಮ್ಮಂದಿರು ಬಂಧುಗಳು ಈ ದೇವತೆಯ ಹಬ್ಬ ಹರಿದಿನಗಳಲ್ಲಿ ಪೂಜೆಯಲ್ಲಿ ಭಾಗವಹಿಸುವಂತಿಲ್ಲ. ಹುಟ್ಟು, ಸಾವು, ಮೈನೆರೆಯುವುದು ಇತ್ಯಾದಿಗಳನ್ನು ಗ್ರಾಮಾಂತರ ಜನರು ಸೂತಕ ಎಂದು ಪರಿಗಣಿಸುತ್ತಾರೆ. ಮಗು ಹುಟ್ಟಿದರೆ ಐದು ದಿನ ಸೂತಕ (ಗುಣ್ಣಿಗೆಯ ನಂತರ ಅದು ಮುಗಿಯುತ್ತದೆ) ಮೈನೆರೆದರೆ ಏಳುದಿನಗಳವರೆಗೆ ಸೂತಕ. ಸೊಪ್ಪು ಹಾಕಿದ ನಂತರ ಅದು ಮುರಿಯುತ್ತದೆ. ಸತ್ತವರ ಮನೆಯ ಸೂತಕ ಹನ್ನೊಂದು ದಿನ ಇರುತ್ತದೆ. ತಿಥಿಯೊಂದಿಗೆ ಅದು ಮುಗಿಯುತ್ತದೆ. ಇನ್ನು ಹೊರಗಾದವರು, ಶವ ಯಾತ್ರೆಯಲ್ಲಿ ಪಾಲುಗೊಂಡವರು ಮುಂತಾದವರಿಗೆ ಮೂರು ದಿನಗಳ ಸೂತಕ ಉಂಟು. ಇಂತಹ ದಿನಗಳಲ್ಲಿ ದೇವತೆಯ ಪೂಜೆ, ದೇವಾಲಯ ಪ್ರವೇಶ ನಿಷಿದ್ಧ.

ಈ ದೇವತೆಯ ಕಲಶ ಕನ್ನಡಿ ಹೊರುವವರು ಹೆಣ್ಣುಮಕ್ಕಳೇ ಆಗಿರಬೇಕು. ಆದರೆ ಅವರು ಋತುಮತಿಯಾಗಿರಬಾರದು. ಮಕ್ಕಳನ್ನು ದೇವರಸಮಾನ ಎನ್ನುವುದು ಇದಕ್ಕೇ ಇರಬೇಕು. ಮಡೆ ಹೊರುವ ಹೆಂಗಸರಲ್ಲಿ ಹೊರಗಾದವರು ಮಡೆಯನ್ನು ಹೊರುವುದಿಲ್ಲ. ಋತುಮತಿಯರಾಗದ ಹೆಣ್ಣುಮಕ್ಕಳೇ ಪೂಜೆ ಮಾಡಬೇಕೆಂಬ ನಿಯಮವೂ ಕೆಲವು ಗ್ರಾಮದೇವತೆಗಳ ದೇವಾಲಯಗಳಲ್ಲಿದೆ. ಅಂತಹ ಹೆಣ್ಣುಮಕ್ಕಳು ದೇವತೆಯಾದ ಪ್ರಸಂಗಗಳು ಕಂಡುಬರುತ್ತವೆ. ಉದಾಹರಣೆಗೆ ಮಂಡ್ಯ ಜಿಲ್ಲೆಯ ಕನ್ನಂಬಾಡಿ ಅಮ್ಮನನ್ನು ನೋಡಬಹುದು. ಋತುಮತಿಯಾಗುವ ಮೊದಲು ಮದುವೆ ಮಾಡಬೇಕೆಂಬ ಬಾಲ್ಯ ವಿವಾಹ ಪದ್ಧತಿಯಿಂದ ಇವೆಲ್ಲ ಹುಟ್ಟಿಕೊಂಡಿರಬಹುದು.

ದೇವತೆಯ ದೂತರಿಗೆ, ಬಂಟರಿಗೆ, ಕಾವಲುಗಾರರಿಗೆ ಬಲಿ ಕೊಡುವ ಮಾಂಸಾಹಾರ ಮಾಡುವ ಆಚರಣೆ ಉಂಟು ಇದನ್ನು ದೇವತೆ ವಿರೋಧಿಸುವುದಿಲ್ಲ ಎಂದು ಜನ ನಂಬುತ್ತಾರೆ. ಈ ದೇವತೆಯ ತಂಗಿಯೆಂದು ಕರೆಯುವ ಚಿಕ್ಕಮ್ಮನಿಗೆ ಬಲಿ ಮತ್ತು ಮಾಂಸಾಹಾರಗಳುಂಟು.

ಮಾಯಮ್ಮ ಬಹುಶಃ ಸೌಮ್ಯದೇವತೆಯಾದುದರಿಂದಲೋ ಏನೋ ಅಷ್ಟಾಗಿ ಪವಾಡಗಳು ಕಂಡು ಬರುವುದಿಲ್ಲ. ಬಾಯಿಬೀಗ ಚಾವಟಿ ಏಟನಂತಹ ಕೆಲವು ಆಚರಣೆಗಳಿವೆ. ಆದರೆ ಸಿಡಿಯಂತಹ ಭಯಂಕರ ಆಚರಣೆ ಕಂಡುಬರುವುದಿಲ್ಲ. ಸಣ್ಣಪುಟ್ಟ

ಶಂಕೆ ಮುಂತಾದವುಗಳಿಗೆ ಹರಕೆ ಮಾಡಿಕೊಳ್ಳುವುದುಂಟು. ಈ ದೇವತೆ ಯಾರನ್ನೂ ಕ್ರೂರವಾಗಿ ಹಿಂಸಿಸಿದ ಕತೆಗಳು ದೊರೆಯುವುದಿಲ್ಲ. ಒಟ್ಟಿನಲ್ಲಿ ಈ ದೇವತೆಯ ಬಗೆಗಿನ ವಿಧಿ ನಿಷೇದಗಳು ಮತ್ತು ಆಚರಣೆಗಳು ಸೌಮ್ಯರೂಪದವಾಗಿವೆ.

* * * * *

## ಮಾಯಮ್ಮನನ್ನು ಕುರಿತ ಹಾಡುಗಳು

ಹೆತ್ತಗೋನಹಳ್ಳಿ ಮಾಯಮ್ಮನನ್ನು ಕುರಿತಂತೆ ದೊರೆಯುವ ಕೆಲವು ಕತೆಗಳನ್ನು ಈ ಹಿಂದೆಯೇ ಉಲ್ಲೇಖಿಸಲಾಗಿದೆ. ಅವು ನಮ್ಮ ದೇವತೆಗಳ ಬಗೆಗಿರುವ ಕಥೆಗಳ ಬೇರೆ ಬೇರೆ ರೂಪವೆ. ಒಂದೇ ಮೂಲದಿಂದ ಬರುವ ಈ ದೇವತೆಗಳು ಮತ್ತು ಅವರ ಉಗಮದ ಕಥೆಗಳು ಮುಂದೆ ಪ್ರಾದೇಶಿಕತೆಯನ್ನು ಪಡೆದುಕೊಳ್ಳುತ್ತವೆ. ಕೆಲವು ದೇವತೆಗಳ ಬಗ್ಗೆ ವಿಪುಲವಾದ ಸಾಹಿತ್ಯವೇ ದೊರೆಯುತ್ತದೆ. ಉಜ್ಜನಿ ಚೌಡಮ್ಮ, ಮಳಲಿ ಗಿಡ್ಡಮ್ಮ, ಮೂಗೂರು ತಿಬ್ಬಾದೇವಿ- ಹೀಗೆ ಕೆಲವು ಗ್ರಂಥಗಳೇ ಪ್ರಕಟವಾಗಿವೆ. ಆದರೆ ಈ ದೇವತೆಯ ಬಗ್ಗೆ ಅಂತಹ ವಿಪುಲವಾದ ಸಾಹಿತ್ಯವೇನೂ ದೊರೆಯುವುದಿಲ್ಲ. ಹಿಂದೆ ಬೇಕಾದಷ್ಟು ಹಾಡುತ್ತಿದ್ದರು. ಈಗ ಕಲಿಕಾಲ. ಈಗಿನ ಹೆಣ್ಣುಮಕ್ಕಳು ಅವುಗಳನ್ನು ಕಲಿಯುವುದಿಲ್ಲ ಎಂದು ಹಿರಿಯರು ದೂರುತ್ತಾರೆ. ಹರಿಜನ ತಮಟೆ ಬಡಿಯುವವರು ಹೇಳುತ್ತಿದ್ದ ಹೊಗಳಿಕೆಯ ಪದಗಳಂತೂ ದೊರೆಯುವುದೇ ಇಲ್ಲ. ದೇವರನ್ನು ಮೆರೆಸುವಾಗ ಇಡೀ ದಿನ ಈ ಹಾಡುಗಳನ್ನು ಹಾಡುತ್ತಿದ್ದರಂತೆ. ಈಗ ಹೆಂಗಸರು ಹಾಡುವ ಒಂದೆರಡು ಗೀತೆ ಮತ್ತು ಕೋಲಾಟದವರು ಹಾಡುವ ಗೀತೆ ದೊರೆಯುತ್ತವೆ. ಅವುಗಳನ್ನು ಇಲ್ಲಿ ಕೊಡುತ್ತಿದ್ದೇನೆ.

೧

ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೇ ಬೇಕವ್ವ ನಿನಿಗೆ

ಸಣ್ಣಂಚಿನ ಸೀರೆ ನ್ಯಾಕೆ ಮ್ಯೊಲಾಕ್ಯಾವೆ
ಯಾಕೆ ಮಾಯವ್ವ ಉಡಲೊಲ್ಲೆ
ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೇ ಬೇಕವ್ವ ನಿನಿಗೆ

ಹೆಣ್ಣುಮಕ್ಕಳಲ್ಲಿ ಪುಣ್ಯವಂತೆ ಮಾಯವ್ವ
ಹಣ್ಣುಹಲಸಿನ ಮರದಡೀಲಿ ಕೂತುಗೊಂಡು
ಏನು ಬೇಕವ್ವ ನಿನಗೆ

ಸಣ್ಣಂಚಿನ ಸೀರೆ ಸೆರಗ ಬಂಗಾರ
ಹೂವೇ ಬೇಕವ್ವ ನಿನಗೆ

ಹಣ್ಣು ಹಲಸಿನ ಮರದಡೀಲಿ ಕೂತುಗೊಂಡು
ಪತುರವ ಬರೆದಳು ಮಾಯವ್ವ

ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೇ ಬೇಕವ್ವ ನಿನಗೆ

ಹಣ್ಣು ಹಲಸಿನಮರದ ನೆಳಲಿ ಕೂತುಗೊಂಡು
ಮಾಯವ್ವ ಏನಂತ ಪತುರ ಬರೆದಾಳು
ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೆ ಬೇಕವ್ವ ನಿನಗೆ

ಮರದಡಿಲಿ ಕುತುಕೊಂಡು ಮಾಯವ್ವ
ಪತುರವ ಬರೆದಳು ದೂರದೂರಿಂದ ಬರಲಿಲ್ಲ ಮಗಳು
ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೆ ಬೇಕವ್ವ ನಿನಗೆ

ವಾಲು ತಾಳೆ ತಾಯಿ ಜೋಲುತಾಳೆ
ಜೋಲುತಾಳೆ ತಾಯಿ ಜಂಪೆನಾಡುತಾಳೆ
ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೆ ಬೇಕವ್ವ ನಿನಿಗೆ

ಜಗ್ಗುತಾಳೆ ತಾಯಿ ಜಂಪೆನಾಡುತಾಳೆ
ತಿರುಗು ನೋಡುತಾಳೆ ತಾಯಿ ಗುಡಿಗೆ ಹೋಗುತ್ತಾಳೆ
ಏನು ಬೇಕವ್ವ ನಿನಿಗೆ
ಸಣ್ಣಂಚಿನ ಸೀರೆ ಸೆರಗು ಬಂಗಾರ
ಹೂವೆ ಬೇಕವ್ವ ನಿನಿಗೆ

೨

ಒಯ್ಯಾರೆ ಬೆರಸುತ ಯಾಲಕ್ಕಿ ಗೊನೆಗಡಲೆ
ಯಾಲಕ್ಕಿ ಬಂದೊ ಎಲೆಪಿಂಡಿ ಬಂದೊ
ಗೋದುಮೆ ಬಂದೊ ಗೊನೆಬಂದೊ ಮಾಯವ್ವ
ಇಟ್ಟಾಡಿ ಬಂದೊ ಹಣುಗಾಯಿ
ಒಯ್ಯಾರೆ ಬೆರಸುತ ಯಾಲಕ್ಕಿ ಗೊನೆಗಡಲೆ
ಇಟ್ಟಾಡಿ ಬಂದೊ ಹಣುಕಾಯಿ ಮಾಯವ್ವ
ತಟ್ಟೈಸಿ ಬಂದೊ [illegible]ಮಡಿ

ತಟ್ಟೈಸಿ ಬಂದೂ ಸಿಡಿ ಮಡೆ ಮಾಯವ್ವ
ಒಟ್ಟಾಗಿ ನಿನ್ನ ಗುಡಿಯೊಳಗೆ
ಒಯ್ಯಾರೆ ಬೆರಸುತ ಯಾಲಕ್ಕಿ ಗೊನೆಗಡಲೆ
ತಾಯಿ ಮಾಯವ್ವ ಆದು ಕಾಣೆ ತವುರು ಮನೆ
ಕೆಳ್ಳಲ ಕೇರಿಯ ಮನೆಯೊಳಿ
ಕೆಳ್ಳಲ ಕೇರಿಯ ಮನೆಯೋಳಿ ಮಾಯಕ್ಕ
ತಾಯಿ ಮಾಯಮ್ಮಗೆ ಹೆಸರೇಳಿ
ಒಯ್ಯಾರೆ ಬೆರಸುತ ಯಾಲಕ್ಕಿ ಗೊನೆಗಡಲೆ
ತಾಯಿ ಮಾಯಮ್ಮನ ಹೆಸರೇಕೆ ಹೇಳಲಿ

ಹಾಲಲಿ ಉಣ್ಣೋ ಗಂಡು ಮಗನ
ಹಾಲಲಿ ಉಣ್ಣೋ ಗಂಡು ಮಗನ ಮಾಯವ್ವ
ಹೆಸರೇಳಿ ಬಿಡುತೀನಿ ಕೇಳವ್ವ

ಒಯ್ಯಾರೆ ಬೆರಸುತ ಯಾಲಕ್ಕಿ ಗೊನೆಗಡಲೆ
ಹಾಲಲ್ಲಿ ಉಣ್ಣೋ ಗಂಡುಮಗನ ಕೊಟ್ಟಾರೆ
ಹಾಲಿಗೊಪ್ಪತ್ತು ಹಸವೇನೆ
ಆಲದಮರಕೆ ಅಟ್ಟವನಾಕಿಸ್ಯಾಳಿ
ಹತ್ತಿ ನೋಡ್ಯಾಳಿ ತವರೂರ
ಒಯ್ಯಾರೆ ಬೆರಸೂತ ಯಾಲಕ್ಕಿ ಗೊನೆಗಡಲೆ
ಆಲದ ಮರವ ಹತ್ತಿ ನೋಡಾಳಿ ತೌರೂರ
ಬಿಲ್ಲೇನಹಳ್ಳಿಯಿಂದ ಅಕ್ಕಿ ಹೊಂಬಾಳಿ ಬರುವುದ
ಹತ್ತಿಯ ಮರಕೆ ಕತ್ತಿಯ ನಾಟ್ಯಾಳಿ
ಹತ್ತಿ ನೋಡಾಳಿ ತೌರೂರು ಬಿಲ್ಲೇನಳ್ಳಿ
ಅಕ್ಕಿ ಹೊಂಬಾಳಿ ಬರುವುದ.

೩

ಪೂಜಾರಣ್ಣಯ್ಯಗೆ ಪೂಜೆರಡು ಘನವಾದೊ
ಉರು ಉರಸಿ ಉರಿಯೋದ್ಯಾಕೆ
ಉರು ಉರಿಯೋದ್ಯಾಕೆ ಮಾಯವ್ವ
ಬರುತಾನೆ ನಿನಮಗ ಪೂಜಾರಿ

ಏರಿಯ ಮ್ಯಾಲೆ ನಿಂತುಕೊಂಡು ಮಾಯವ್ವ
ಯಾರ್ಯ್ಯಾರ ಕೂಗಿ ಕರೆದೀಯೆ
ಯಾರ್ಯ್ಯಾರ ಕೂಗಿ ಕರೆದೀಯೆ ಮಾಯವ್ವ
ದೂರ ಹೊಗ್ಯವನೆ ನಿನುಮಗ

ಉರ ಉರನೆ ಉರಿಯೋದ್ಯಾಕೆ
ದೂರ ಹೊಗ್ಯವನೆ ನಿನಮಗ ಪೂಜಾರಿ
ಊರೂರ ಮೇಲೆ ಹೊಗಳುತ
ಊರೂರ ಮೇಲೆ ನಿನ್ನ ಹೊಗಳುತ ಮಾಯವ್ವ

ಭೋರನೆ ಬರುತಾನೆ ಸುಮಗಿರೆ
ಉರ ಉರನೆ ಉರಿಯೋದ್ಯಾಕೆ
ಎಲ್ಲಿಗೋಗ್ಯವನೆ ನಿನ ಮಗ ಪೂಜಾರಿ
ಪೂಜಿಸೊ ಬಳಿಯ ತರುವೋಕೆ
ಪೂಜಿಸೊ ಬಳಿಯ ತರುವೋಕೆ ಮಾಯವ್ವ
ದೂರದ ಹೊಳಿಗೆ ಹೊಗವ್ನೆ ನಿನಮಗ
ಉರ ಉರನೆ ಉರಿಯೋದ್ಯಾಕೆ.

೪

ಅಂದದ ಚೆಂದಾದ ಮಾಯ್ಯಾರಿ ಮಾಯಮ್ಗೆ
ಚೆಲ್ಲಿದರು ಮಲ್ಲಿಗೆಯ
ಚೆಲ್ಲಿದರು ಮಲ್ಲಿಗೆಯ ಬಾಳಾಪುರದ ಏರಿಮೇಲೆ
ಅಂದದ ಚೆಂದಾದ ಮಾಯ್ಯಾರಿ ಮಾಯಮ್ಗೆ
ಚೆಲ್ಲಿದರು ಮಲ್ಲಿಗೆಯ
ಹಿಪ್ಪೆಯ ಬೇಗೆಯ ಸುಡುತಾದೆ ಜೀವಾವು
ಯಾವ ಜನ್ಮಾದ ಪಾಪಕ್ಕಾಗಿ ಚೆಲ್ಲಿದಾರೂ ಮಲ್ಲಿಗೆಯ
ಯಾವ ಜನ್ಮಾದ ಪಾಪಕ್ಕಾಗಿ ಚೆಲ್ಲಿದಾರೂ ಮಲ್ಲಿಗೆಯ
ಚೆಲ್ಲಿದರು ಮಲ್ಲಿಗೆಯ ಬಾಳಪುರದ ಏರಿಮೇಲೆ
ಅಂದದ ಚೆಂದದ ಮಾಯ್ಯಾರಿ ಮಾಯಮ್ಗೆ
ಚೆಲ್ಲಿದರು ಮಲ್ಲಿಗೆಯ
ಪಾಪಿ ಹೊಟ್ಟೆಲುಟ್ಟಿ ಪರದೇಶಿ ನಾನಾದೆ
ಪಾಪಿ ಹೊಟ್ಟೆಲುಟ್ಟಿ ಪರದೇಶಿ ನಾನಾದೆ
ಪಂಚ ಪಾದಪನ ಕೈಯ ಹಿಡಿದೇ ಚೆಲ್ಲಿದರೂ ಮಲ್ಲಿಗೆಯ
ಪಂಚ ಪಾದಪನ ಕೈಯ ಹಿಡಿದೇ ಚೆಲ್ಲಿದರೂ ಮಲ್ಲಿಗೆಯ
ಪಂಚ ಪಾದಪನ ಕೈಯ ಹಿಡಿದೆ ಶಿವರಾಯ

ಈ ರಾಕ್ಷಸಿ ಮನೆಗೆ ಸೊಸೆಯಾದೆ ಚೆಲ್ಲಿದರೊ ಮಲ್ಲಿಗೆಯ
ಈ ರಾಕ್ಷಸಿ ಮನೆಗೆ ಸೊಸೆಯಾದೆ ಚೆಲ್ಲಿದರೊ ಮಲ್ಲಿಗೆಯ
ಚೆಲ್ಲಿದರೊ ಮಲ್ಲಿಗೆಯ ಬಾಳಾಪುರದ ಏರಿಮೇಲೆ
ಅಂದದ ಚೆಂದಾದ ಮಾಯ್ಯಾರಿ ಮಾಯಮ್ಗೆ

ಚೆಲ್ಲಿದರು ಮಲ್ಲಿಗೆಯ

ಗಂಡನ ಮನೆ ಚಂದ ಸೀಗೆಬುತ್ತಿ ಚಂದ
ಅತ್ತೆ ಎಂಬೋಳು ಊರು ಮಾರೆ ಚೆಲ್ಲಿದರೂ ಮಲ್ಲಿಗೆಯ
ಅತ್ತೆ ಎಂಬೋಳ ಊರುಮಾರೆ ಕಂಡಾರೆ
ಅತ್ತೆ ಎಂಬೋಳ ಊರುಮಾರೆ ಕಂಡಾರೆ ಕಂಡಾರೆ ನನಗೆ
ಬೆವರಿತು ಚೆಲ್ಲಿದರೂ ಮಲ್ಲಿಗೆಯ
ಚೆಲ್ಲಿದರು ಮಲ್ಲಿಗೆಯ ಬಾಳಾಪುರದ ಏರಿಮೇಲೆ
ಅಂದದ ಚಂದಾದ ಮಾಯ್ಕಾರಿ ಮಾಯಮ್ಮ
ಚೆಲ್ಲಿದರು ಮಲ್ಲಿಗೆಯ

ಬೆಳಗಾಗ ಬಿಡುವಿಲ್ಲ ಮೈಯಿಗೆ ನಿದ್ರಿಲ್ಲ
ಬೆಳಗಾಗ ಬಿಡುವಿಲ್ಲ ಮೈಯಿಗೆ ನಿದ್ರಿಲ್ಲ
ಕೊಡುವ ಹಿಂಸೆಗೆ ಕೊನೇ ಇಲ್ಲ ಚೆಲ್ಲಿದರು ಮಲ್ಲಿಗೆಯ
ಚೆಲ್ಲಿದರು ಮಲ್ಲಿಗೆಯ ಬಾಳಾಪುರದ ಏರಿಮೇಲೆ
ಅಂದಾದ ಚಂದಾದ ಮಾಯ್ಕಾರಿ ಮಾಯಮ್ಮ
ಚೆಲ್ಲಿದರು ಮಲ್ಲಿಗೆಯ
ಕಾಳಿ ತಂದೆನೆಂದು ಬಡಕೊತ ಬರಬೇಡ
ಹಲಸಿನ ಹಣ್ಣು ಮೈಯೆಲ್ಲ ಮುಳ್ಳು, ಚೆಲ್ಲಿದರೂ ಮಲ್ಲಿಗೆಯ
ಹಲಸಿನ ಹಣ್ಣು ಮೈಯೆಲ್ಲ ಮುಳ್ಳಾದ್ರೆ
ಸುಲಿದು ನೋಡಿದರೆ ಬಾಳ ರುಚಿ ಚೆಲ್ಲಿದರೊ ಮಲ್ಲಿಗೆಯ
ಚೆಲ್ಲಿದರು ಮಲ್ಲಿಗೆಯ ಬಾಳಾಪುರದ ಏರಿಮೇಲೆ
ಅಂದಾದ ಚಂದಾದ ಮಾಯ್ಕಾರಿ ಮಾಯಮ್ಮ
ಚೆಲ್ಲಿದರು ಮಲ್ಲಿಗೆಯ
ಕಪ್ಪೆಂದು ನಗಬೇಡ. ವ್ಯಸಾನ ಪಡಬೇಡ
ಕಪ್ಪಾದ ಹಸುವ ಕರೆದಾರೆ ಚೆಲ್ಲಿದರೂ ಮಲ್ಲಿಗೆಯ
ಕಪ್ಪಾದ ಹಸುವ ಕರೆದಾರೆ ಆ ಹಾಲು ಒಪ್ಪೆಂದು
ನಮ್ಮ ಮಾಯಮ್ಮನ ಪೂಜೆಗೆ ಚೆಲ್ಲಿದರೂ ಮಲ್ಲಿಗೆಯ
ಚೆಲ್ಲಿದರೂ ಮಲ್ಲಿಗೆಯ ಬಾಳಾಪುರದ ಏರಿಮೇಲೆ
ಅಂದಾದ ಚಂದಾದ ಮಾಯ್ಕಾರಿ ಮಾಯಮ್ಮ
ಚೆಲ್ಲಿದರು ಮಲ್ಲಿಗೆಯ

೫

ತಾನಾನೊ ತಾನಾನೊ ತಾನು ತಂದಾನನೊ
ತಾಳಿ ಬೆಳಯೊ ತಾಮಂಡೆ ಸೀಗೆ ಬಿಳಿಯಾ ಸೀ ಮಂದೆ

ದಾಳಿಂಬೆ ಬೆಳಿಯೊದೊ ತಾನನ್ನ
ದಾಳಿಂಬಿ ಬೆಳಿಯೊಂದದುಬುತ ಊರ್‍ಮುಂದೆ
ತಾಯಿ ಮಾಯಮ್ಮನ ಬಿಡಿಮರ ತಾನನ್ನನಾ
ಬಂಡಿತಾನೋ ಬಂಡೆ ಕೊಂಡಿತಾನೊ ಕೊಪ್ಪಂದ
ಬಂಡಿಯಾ ಮೇಲೆ ಬರುವ ಮಾಯಮ್ಮಗೆ
ಬಂಡಿ ಹೊಳೆದಾವೆ ಬಿಸಲಿಗೆ ತಾನನ

ಕಟ್ಟಿ ಶುಕ್ರವಾರ ನಟ್ಟಿ ಮಧ್ಯಾಹ್ನಾಗ
ಚೆಂದ ತಾನಮ್ಮ ಕನ್ನಂಬಾಡಿ ಹೊಳೆಯಲ್ಲಿ
ನೀ ಯಾರು ಮಡಿಯ ಉಡುವಳು ತಾನನ
ಬಾಯಿ ಬೀಗದವರು ಬಂದವ್ರೆ ಬಾಗ್ಲಲ್ಲಿ ನಿಂತವ್ರೆ
ಎಷ್ಟೊತ್ತೆ ತಾಯಿ ಐ ಭೋಗ ತಾನನ
ಎಷ್ಟೊತ್ತ ತಾಯಿ ಐ ಭೋಗ ಗುಡಿ ಮುಂದೆ
ಒಪ್ಪಿಸಿಕೊಳ್ಳಿ ಹರಕೇಯ ತಾನನ್ನ
ಹಕ್ಕನಾ ಪಕ್ಷಕ್ಕೆ ಚಿಕ್ಕಾವ್ವನಾ ಮಕ್ಕೇನೆ
ಸುತ್ತಾಡಿ ನಿನ್ನ ಪವಳಿಯ ತಾನನ್ನ
ಸುತ್ತಾಡಿ ನಿನ್ನ ಪವಳಿ ಬಾಗ್ಲ ಮುಂದೆ
ಒಪ್ಪಿಸಿ ಹೋಗೆ ಹರಕೆಯ ತಾನನ್ನ

ಹತ್ತಿಯ ಮರಕೆ ಕತ್ತಿಯ ನಿಟ್ಟಾಳಿ
ಹತ್ತಿನೋಡ್ಯಾಳಿ ತವರೂರ ತಾನನ್ನ
ಹತ್ತಿ ನೋಡ್ಯಾಳಿ ತವರು ತವನಂದಿಯ
ಅಕ್ಕಿ ಹೊಂಬಾಳಿ ಬರುವುದ ತಾನನ್ನ
ಆಲದ ಮರಕೆ ಆಯ್ದು ಪನಿಟ್ಟಳಿ
ಬಾಗಿ ನೋಡ್ಯಾಳಿ ತವರೂರ ತಾನನ್ನ
ಬಾಗಿ ನೋಡ್ಯಾಳಿ ತವ್ರು ತವರಂದಿಯ
ಕಾಯಿ ಹೊಂಬಾಳಿ ಬರುವಾಗ ತಾನನ್ನ

೬

ತಾನಾನೋ ತಾನಾನೋ ತಾನು ತಂದಾನನೊ
ಜೋಡಿಮಲ್ಲಿಗೂವ ಜೊತೆಮಾಲೆ ಕಟ್ಟಿ
ಜೋಡಡ್ಡೆ ಮೇಲೆ ಬರುವ್ಳೊ ತಾನನ
ಜೋಡಡ್ಡೆ ಮೇಲೆ ಬರ್‍ವ ಮಾಯಮ್ಮಗೆ
ಜೋಡಿಸಿ ಕೈಯ ಮುಗುವೆವು ತಾನನ
ಪರಿಮ್ಯಾಲ್ಲಿಂತ್ಕಂಡು ಯಾರ್‍ಯಾರ ನಂಬಿಯೆ

ವೀರ ಕೆಂಪಣ್ಣ ನಿನಮಗ ತಾನನ
ವೀರ ಕೆಂಪಣ್ಣ ನಿನಮಗ ಮಾಯಮ್ಮ
ದೂರ ಹೋಗ್ಯವ್ನೆ ನಿನಮಗ ತಾನನ
ದೂರ ಹೋಗ್ಯವ್ನೆ ನಿನಮಗ ಮಾಯವ್ವ
ತೇರಿಗೊಂಬಾಳೆ ತರಲಿಕ್ಕೆ ತಾನನ
ಮಗ್ಗಿನ ಹಚ್ಚಡ ಮಡಿಗಿದ್ರೆ ಶ್ಯಂಗಾರ
ಲೆಗ್ಗೆ ಕೋಟೆಂದ ಬರುವೊಳೆ ತಾನನ
ಲೆಗ್ಗೆ ಕೋಟೆಂದ ಬರ್ವ ಮಾಯಮ್ಮಗೆ
ಮಗ್ಗು ಬಾಡ್ತಾವೆ ಬಿಸಲಿಗೆ ತಾನನ
ಹೆರಗಿನ ಒಗ್ಗಲ್ಲಿ ಮರುಗಾವ ಕುಯ್ಯೋಳೆ
ಮರ್ಗುದಾ ಗಮನಕೆ ಬೆವ್ರುರ್‍ತ್ಯಾಳೆ ತಾನನ
ಮರ್ಗು ಗಮನಕ್ಕೆ ಬೆವ್ರೊ ಮಾಯಮ್ಮಗೆ
ಮಗ್ಗು ಬಾಡ್ತಾವೆ ಬಿಸಲಿಗೆ ತಾನನ
ಲೆಗ್ಗೆ ತೊಗ್ಗೆ ಕೋಟೆಂದ ಬರುವ ಮಾಯಮ್ಮಗೆ
ಬೀಸಮ್ಮ ಬೆಳ್ಳಿಯ ಚವುಲವ ತಾನನ.

* * * * *

## ವಕ್ತೃಗಳು

| | | | |
|---|---|---|---|
| 1 | ಶ್ರೀಮತಿ ನಿಂಗಮ್ಮ | : | ಹನುಮನಹಳ್ಳಿ, ನಾಗಮಂಗಲ ತಾಲ್ಲೂಕು. ಒಕ್ಕಲಿಗರು. ಸುಮಾರು90 ವರ್ಷಗಳು. ಓದುಬರಹ ಬಲ್ಲವರಲ್ಲ. |
| 2 | ಶ್ರೀ ತಿಮ್ಮಪ್ಪ | : | ಗೊರವಿ ಗ್ರಾಮ. ಕೃಷ್ಣರಾಜ ಪೇಟೆ ತಾಲ್ಲೂಕು ಸುಮಾರು 70 ವರ್ಷ. ಮಾಯಮ್ಮ ದೇವಾಲಯದ ಮುಖ್ಯಸ್ಥರಲ್ಲೊಬ್ಬರು. ಅಕ್ಷರಸ್ತರು ವ್ಯವಸಾಯ ಕಸುಬು 70 ವರ್ಷ |
| 3 | ಶ್ರೀ ಮಾಯಪ್ಪ | : | ಹೆತ್ತಗೋನಹಳ್ಳಿ ಮಾಯಮ್ಮನ ಪೂಜಾರಿ. ಸುಮಾರು 50 ವರ್ಷ. ಓದುಬರಹ ಬಲ್ಲವರಲ್ಲ. |
| 4 | ಶ್ರೀ ಶಿವಲಿಂಗೇಗೌಡ | : | ಗೊರವಿ ಗ್ರಾಮ. ಕೃಷ್ಣರಾಜ ಪೇಟೆ ತಾಲ್ಲೂಕು. ವಯಸ್ಸು 40 ವರ್ಷ. ದೇವಸ್ಥಾನದ ಮುಖ್ಯಸ್ಥರಲ್ಲೊಬ್ಬರು. ಎಂಟನೇ ತರಗತಿಯವರೆಗೆ ಓದಿದ್ದಾರೆ. ಕಸುಬು ವ್ಯವಸಾಯ. |
| 5 | ಶ್ರೀ ರಂಗೇಗೌಡ | : | ಗೊರವಿ ಗ್ರಾಮ. ವಯಸ್ಸು 35 ವರ್ಷ. ಕಸುಬು ವ್ಯವಸಾಯ. ವಿದ್ಯಾವಂತರಲ್ಲ. |
| 6 | ಶ್ರೀ ಶೆಟ್ಟಿಗೌಡ | : | ಹೆತ್ತಗೋನಹಳ್ಳಿ ದೇವಾಲಯದ ಮುಖ್ಯಸ್ಥರಲೊಬ್ಬರು ಒಕ್ಕಲಿಗರು. ಸುಮಾರು60 ವರ್ಷ. ಕಸುಬು ವ್ಯವಸಾಯ. ಓದುಬರಹ ಬಲ್ಲವರಲ್ಲ. |
| 7 | ಶ್ರೀ ಮಾಯಣ್ಣಗೌಡ | : | ಹೆತ್ತಗೋನಹಳ್ಳಿ. ಒಕ್ಕಲಿಗರು. ವಯಸ್ಸು ಸುಮಾರು 60 ವರ್ಷ. ಕಸುಬು ವ್ಯವಸಾಯ. ಓದು ಬರಹಬಲ್ಲವರಲ್ಲ. |
| 8 | ಶ್ರೀ ನರಸಿಂಹೇಗೌಡ | : | ಜಾಗಿನಕೆರೆ. ಒಕ್ಕಲಿಗರು. ವಯಸ್ಸು ಸುಮಾರು70 ವರ್ಷ ಕಸುಬು ವ್ಯವಸಾಯ. ಓದು ಬರಹ ಬಲ್ಲವರಲ್ಲ. |
| 9 | ಶ್ರೀ ಕುಮಾರ | : | ಗೊರವಿ ಗ್ರಾಮ. ಒಕ್ಕಲಿಗರು. ವಯಸ್ಸು ಸುಮಾರು 25 ವರ್ಷ. ಕಸುಬು ವ್ಯವಸಾಯ. ಎಂಟನೇ ತರಗತಿಯವರೆಗೆ ಓದಿದ್ದಾರೆ. |

10 ಶ್ರೀಮತಿ ಶಾಂತಮ್ಮ : ಗೊರವಿ ಗ್ರಾಮ. ಒಕ್ಕಲಿಗರು. ವಯಸ್ಸು 25 ವರ್ಷ.
ಮುಖ್ಯ ಹಾಡುಗಾರ್ತಿ ಓದು ಬರಹ ಬಲ್ಲವರಲ್ಲ.

11 ಶ್ರೀಮತಿ ಶಂಕರಮ್ಮ: ಗೊರವಿ ಗ್ರಾಮ. ಒಕ್ಕಲಿಗರು. ವಯಸ್ಸು ಸುಮಾರು
25 ವರ್ಷ. ಜೊತೆ ಹಾಡುಗಾರ್ತಿ. ಓದು ಬರಹ

12 ಶ್ರೀಮತಿ ಲಕ್ಷ್ಮಮ್ಮ : ಗೊರವಿ ಗ್ರಾಮ. ಒಕ್ಕಲಿಗರು. ವಯಸ್ಸು ಸುಮಾರು
25 ವರ್ಷ. ಓಮ್ಮೇಳ ಹಾಡುಗಾರ್ತಿ.
ಓದುಬರಹ ಬಲ್ಲವರಲ್ಲ.

13 ಶ್ರೀಮತಿ ಭಾಗ್ಯಮ್ಮ : ಗೊರವಿ ಗ್ರಾಮ. ಒಕ್ಕಲಿಗರು. ವಯಸ್ಸು ಸುಮಾರು
30 ವರ್ಷ. ಓಮ್ಮೇಳ ಹಾಡುಗಾರ್ತಿ
ಓದು ಬರಹಬಲ್ಲವರಲ್ಲ

14 ಶ್ರೀಮತಿ ನಿಂಗಮ್ಮ : ಬಿಲ್ಲೇನಹಳ್ಳಿ. ಹರಿಜನರು. ವಯಸ್ಸು ಸುಮಾರು ವರ್ಷ
ಮುಖ್ಯ ಹಾಡುಗಾರ್ತಿ. ಓದು ಬರಹ ಬಲ್ಲವರಲ್ಲ

15 ಶ್ರೀಮತಿ ಪುಟ್ಟಮ್ಮ : ಬಿಲ್ಲೇನಹಳ್ಳಿ. ಹರಿಜನರು. ವಯಸ್ಸು ಸುಮಾರು 45ವರ್ಷ
ವರ್ಷ. ಜೊತೆ ಹಾಡುಗಾರ್ತಿ. ಓದು ಬರಹ ಬಲ್ಲವರಲ್ಲ

16 ಶ್ರೀಮತಿ ನಂಜಮ್ಮ : ಬಿಲ್ಲೇನಹಳ್ಳಿ, ಹರಿಜನರು. ವಯಸ್ಸು ಸುಮಾರು
40ವರ್ಷ. ಓಮೇಳ ಹಾಡುಗಾರ್ತಿ.
ಓದು ಬರಹ ಬಲ್ಲವರಲ್ಲ.

17 ಶ್ರೀಮತಿ ನಿಂಗಮ್ಮ : ಬಿಲ್ಲೇನಹಳ್ಳಿ. ಹರಿಜನರು. ವಯಸ್ಸು ಸುಮಾರು
40 ವರ್ಷ. ಓಮ್ಮೇಳ ಹಾಡುಗಾರ್ತಿ.
ಓದು ಬರಹ ಬಲ್ಲವರಲ್ಲ.

* * * * *